# ಕುವೆಂಪು ಮತ್ತು ಭಾರತೀಯ ಜ್ಞಾನ ಪರಂಪರೆ: ಬುದ್ಧ-ಬಸವ-ಗಾಂಧೀಜಿ ಅವರನ್ನು ಅನುಲಕ್ಷಿಸಿ

**ಬಿ.ಆರ್. ಸತ್ಯನಾರಾಯಣ**

ಗ್ರಂಥಪಾಲಕರು, ಸುರಾನಾ ಕಾಲೇಜು (ಸ್ವಾಯತ್ತ), ಸೌತ್ ಎಂಡ್ ರಸ್ತೆ,
ಬಸವನಗುಡಿ, ಬೆಂಗಳೂರು.

DOI: https://doi.org/10.5281/zenodo.15795593

## ABSTRACT:

ರಾಷ್ಟ್ರಕವಿ ಕುವೆಂಪು ಅವರ ಬದುಕು-ಬರಹಗಳೆರಡೂ ಕಾಲದೇಶಗಳನ್ನು ಮೀರಿದ ಅಚ್ಚರಿಗೆ ಕಾರಣವಾಗಿವೆ. ಆ ಮಹಾಪ್ರತಿಭೆಯ ಅನಾವರಣಕ್ಕೂ ಮೊದಲು, ಬುದ್ಧ, ಬಸವ, ಪರಮಹಂಸ-ವಿವೇಕಾನಂದ ಮತ್ತು ಗಾಂಧಿ ಮೊದಲಾದವರ ಪ್ರಭಾವಕ್ಕೆ ಕುವೆಂಪು ಒಳಗಾಗಿದ್ದಾರೆ. ಹಲವಾರು ಪರಂಪರೆಗಳ, ಜ್ಞಾನಶಾಖೆಗಳ, ಮತಧರ್ಮಗಳ ಸಾರಸರ್ವಸ್ವವನ್ನೂ, ಮಹಾಪುರುಷರ ಬದುಕನ್ನಷ್ಟೇ ಅಲ್ಲದೆ ಜನಸಾಮಾನ್ಯರ ಬದುಕನ್ನೂ ಕುವೆಂಪು ಪರಿಭಾವಿಸಿದ್ದಾರೆ.

ಕುವೆಂಪು ಅವರ ಬದುಕು ಬರಹಗಳನ್ನು ಬಹುವಾಗಿ ಪ್ರಭಾವಿಸಿದ ಇಬ್ಬರು ಮಹನೀಯರೆಂದರೆ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರು. ಇವರಿಬ್ಬರ, ಕುವೆಂಪು ಅವರ ಮೇಲಿನ ಪ್ರಭಾವ ಪ್ರೇರಣೆಗಳನ್ನು ಕುರಿತು ಹಾಗೂ ಅವರಿಬ್ಬರ ಬಗೆಗಿನ ಕುವೆಂಪು ಗ್ರಹಿಕೆ ಮತ್ತು ಅಭಿವ್ಯಕ್ತಿಯನ್ನು ಕುರಿತು ಹಲವಾರು ಅಧ್ಯಯನಗಳು ನಡೆದಿವೆ. ಇದೇ ಮಾತನ್ನು ಬುದ್ಧ, ಬಸವ ಮತ್ತು ಮಹಾತ್ಮಾ ಗಾಂಧಿಯವರ ಬಗ್ಗೆ ಹೇಳಲಾಗುವುದಿಲ್ಲ. ಗಾಂಧಿಯವರ ಬಗ್ಗೆ ಹಲವಾರು ಕವನಗಳನ್ನು, ಲೇಖನಗಳನ್ನು ಬರೆದಿದ್ದಾರೆ, ಭಾಷಣಗಳನ್ನು ಮಾಡಿದ್ದಾರೆ. ಗಾಂಧಿಯವರನ್ನು ನೋಡಲು ಬೆಳಗಾವಿಗೂ ಹೋಗಿದ್ದರು. ಬುದ್ಧ ಮತ್ತು ಬಸವಣ್ಣನವರ ಬಗ್ಗೆ ಮೂರ್ನಾಲ್ಕು ಪದ್ಯಗಳು ಮತ್ತು ಬಸವಣ್ಣನವರ ಬಗ್ಗೆ ಒಂದು ಪುಟ್ಟ ಲೇಖನವನ್ನೂ ಬರೆದಿದ್ದಾರೆ. ಅವರ 'ಮಹಾರಾತ್ರಿ' ಬುದ್ಧನ ಕುರಿತಾದ ಮಹತ್ವದ ನಾಟಕಗಳಲ್ಲಿ ಒಂದಾಗಿದೆ. ಆದರೆ, ಇವುಗಳನ್ನು ಯಾರೂ ಪರಿಶೀಲಿಸಿದಂತೆ ಕಾಣುವುದಿಲ್ಲ. ಕುವೆಂಪು ಅವರು ಬುದ್ಧ, ಬಸವ ಮತ್ತು ಗಾಂಧಿಯವರನ್ನು ಹೇಗೆ ಪರಿಭಾವಿಸಿದ್ದಾರೆ ಮತ್ತು ಅವರನ್ನು ಅಭಿವ್ಯಕ್ತಿಯಲ್ಲಿ ಹೇಗೆ ಕಂಡರಿಸಿದ್ದಾರೆ ಎಂಬ ಬಗ್ಗೆ ಹಾಗೂ ಕುವೆಂಪು ಅವರ ಮೇಲೆ ಅವರ ಪ್ರಭಾವಗಳೇನು ಎಂಬುದರ ಬಗ್ಗೆ ಅಧ್ಯಯನ ನಡೆಯಬೇಕಿದೆ.

ಕುವೆಂಪು ಅವರ ಸಾಹಿತ್ಯವನ್ನು ಓದಿದ ಯಾರಿಗಾದರೂ, ವಿಭಿನ್ನ ವಿಚಾರಧಾರೆಗಳ ನಡುವೆಯೂ ಸಮನ್ವಯ ಸೂತ್ರವನ್ನು ಕಾಣುವ ಪೂರ್ಣದೃಷ್ಟಿಯನ್ನು ಕವಿ ಸಾಧಿಸಿರುವುದು ಮೇಲ್ನೋಟಕ್ಕೇ ಗೋಚರಿಸುತ್ತದೆ. ಪ್ರಸ್ತುತ, ಉದ್ದೇಶಿತ ಪ್ರಬಂಧದಲ್ಲಿ, ಕುವೆಂಪು ಅವರು ಬುದ್ಧ, ಬಸವ, ಮತ್ತು ಗಾಂಧೀಜಿ – ಈ ಮೂರೂ ಸಾಧಕರನ್ನು ಕುವೆಂಪು ಹೇಗೆ ಗ್ರಹಿಸಿದ್ದಾರೆ ಹಾಗೂ

ಅವರನ್ನು ತಮ್ಮ ಬರಹಗಳಲ್ಲಿ ಅಭಿವ್ಯಕ್ತಿಸಿದ್ದಾರೆ ಎಂಬುದನ್ನು ಪರಿಶೋಧಿಸುವ ಪ್ರಯತ್ನ ನಡೆದಿದೆ.

ಮಾನವೀಯ ಹಾಗೂ ಮೌಲ್ಯಯುತ ಪರಂಪರೆ ಮಾತ್ರ ಸಶಕ್ತ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ಅಧ್ಯಯನಗಳು ನಮ್ಮ ಪರಂಪರೆಯ ಮಹತ್ವವನ್ನು ಅರಿಯಲು ನೆರವಾಗುತ್ತವೆ ಹಾಗೂ ಮುಂದಿನ ತಲೆಮಾರುಗಳಿಗೆ ಸಾಗಿಸುವ ವಾಹಿನಿಗಳೂ ಆಗಿರುತ್ತವೆ.

## KEYWORDS:

ಕುವೆಂಪು, ಬುದ್ಧ, ಬಸವ, ಗಾಂಧಿ, ಪರಂಪರೆ, ಜ್ಞಾನ.

ರಾಷ್ಟ್ರಕವಿ ಕುವೆಂಪು ಅವರ ಬದುಕು-ಬರಹಗಳೆರಡೂ ಕಾಲದೇಶಗಳನ್ನು ಮೀರಿದ ಅಚ್ಚರಿಗೆ ಕಾರಣವಾಗಿವೆ. ಆ ಮಹಾಪ್ರತಿಭೆಯ ಅನಾವರಣಕ್ಕೂ ಮೊದಲು, ಬುದ್ಧ, ಬಸವ, ಪರಮಹಂಸ-ವಿವೇಕಾನಂದ ಮತ್ತು ಗಾಂಧಿ ಮೊದಲಾದವರ ಪ್ರಭಾವಕ್ಕೆ ಕುವೆಂಪು ಒಳಗಾಗಿದ್ದಾರೆ. ಮಹಾಮಹಾ ಪರಂಪರೆಗಳ, ಮಹದ್ವ್ಯಕ್ತಿಗಳ ಜ್ಞಾನದ ಬೆಳಕನ್ನು ಮೆಚ್ಚಿ-ನೆಚ್ಚಿ ಹಿಡಿದು ನಡೆದಂತೆ, ಅತ್ಯಂತ ಜನಸಾಮಾನ್ಯರ ಬದುಕನ್ನೂ ಆಧರಿಸಿ, ಸಾಮಾನ್ಯತೆ ಮತ್ತು ಸಾಮಾನ್ಯರ ಬಗೆಗಿನ ತಿರಸ್ಕೃತಿಯನ್ನು ನಿರಾಕರಿಸಿ, ಕ್ರಮವಾಗಿ 'ಶ್ರೀಸಾಮಾನ್ಯತೆ' (ಸಾಮಾನ್ಯತಾಶ್ರೀ) ಮತ್ತು 'ಶ್ರೀಸಾಮಾನ್ಯ' ಎಂಬ ಪರಿಕಲ್ಪನೆಯನ್ನು ಕನ್ನಡ ಸಂಸ್ಕೃತಿ ಚಿಂತನಾ ಕ್ರಮಕ್ಕೆ ಕೊಡುಗೆ ನೀಡಿದ್ದಾರೆ. ಬಹುಪರಂಪರೆಗಳ, ಬಹುಜ್ಞಾನಶಾಖೆಗಳ, ಮತಧರ್ಮಗಳ ಸಾರಸರ್ವಸ್ವವನ್ನೂ, ಮಹಾಪುರುಷರ ಬದುಕನ್ನಂತೆಯೇ ಶ್ರೀಸಾಮಾನ್ಯರ ಬದುಕನ್ನೂ ಕುವೆಂಪು ಪರಿಭಾವಿಸಿದ್ದಾರೆ ಎಂಬುದಕ್ಕೆ ಅವರ ಕೃತಿಗಳು ಸಾವಯವ ಸಾಕ್ಷಿಗಳಾಗಿ ನಮ್ಮ ಮುಂದಿವೆ.

ಕುವೆಂಪು ಅವರ ಬದುಕು ಬರಹಗಳನ್ನು ಬಹುವಾಗಿ ಪ್ರಭಾವಿಸಿದ ಇಬ್ಬರು ಮಹನೀಯರೆಂದರೆ ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದರು. ಇವರಿಬ್ಬರ, ಕುವೆಂಪು ಅವರ ಮೇಲಿನ ಪ್ರಭಾವ ಪ್ರೇರಣೆಗಳನ್ನು ಕುರಿತು ಹಾಗೂ ಅವರಿಬ್ಬರ ಬಗೆಗಿನ ಕುವೆಂಪು ಗ್ರಹಿಕೆ ಮತ್ತು ಅಭಿವ್ಯಕ್ತಿಯನ್ನು ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಭಾರತೀಯ ಜ್ಞಾನಪರಂಪರೆಯ ಪ್ರಧಾನ ಧಾರೆಗಳಾದ ಬುದ್ಧ, ಬಸವ ಮತ್ತು ಮಹಾತ್ಮಾ ಗಾಂಧಿ ವಿಚಾರಧಾರೆಗಳು ಕುವೆಂಪು ಅವರ ಬದುಕು-ಸಾಹಿತ್ಯವನ್ನು ಪ್ರಭಾವಿಸಿದ್ದರ ಬಗ್ಗೆ, ಹೆಚ್ಚಿನ ಅಧ್ಯಯನಗಳು ಇನ್ನೂ ನಡೆಯಬೇಕಿದೆ.

ಮೌಢ್ಯವೆಂಬುದು ಮನುಕುಲಕ್ಕೆ ಅಂಟಿದ ಬಹುದೊಡ್ಡ ಶಾಪ. ಅದು

ಕಾಲದೇಶಗಳನ್ನು ಮೀರಿದ ಅಂಟುಜಾಡ್ಯ. ಮನುಕುಲದ ವಿಕಸನ ಪಥದಲ್ಲಿ, ಭಾರತದ ಮಟ್ಟಿಗೆ ಮೌಢ್ಯದಿಂದ ಪಾರುಮಾಡಲು ನಡೆದ ಎರಡು ಪ್ರಯತ್ನಗಳನ್ನು ಕುವೆಂಪು ಉಲ್ಲೇಖಿಸುತ್ತಾರೆ. ಅದರಲ್ಲಿ ಒಂದು ಬುದ್ಧನದಾದರೆ, ಇನ್ನೊಂದು ಬಸವಣ್ಣನದು![1] ಸಮಾಜ ಸುಧಾರಕರ ವಿಷಯ ಬಂದಾಗ, "ಸಮಾಜ ಸುಧಾರಣೆಯ ದೃಷ್ಟಿಯಿಂದ ಬಸವೇಶ್ವರರು, ಸಾಕ್ಷಾತ್ಕಾರದ ದೃಷ್ಟಿಯಿಂದ ಬುದ್ಧ" ಎಂಬುದು ಅವರ ಖಚಿತಾಭಿಪ್ರಾಯ.[2]

ಗಾಂಧಿಯವರನ್ನು 'ಸಭ್ಯತಾದೇವತೆ' ಎಂದು ಕರೆಯುವ ಕುವೆಂಪು, ಅವರನ್ನು ಬುದ್ಧ-ಬಸವರ ಸಾಲಿನಲ್ಲಿಯೇ ಇರಿಸಿ, 'ವಿಮೋಚಕ' ಎಂದು ಭಾವಿಸುತ್ತಾರೆ. ಈ ಮೂವರೂ 'ವಿಶ್ವಮಾನವ'ರ ಬಗ್ಗೆ ಕುವೆಂಪು ಮಾತನಾಡುತ್ತಿದ್ದರೂ, ಅದು ಆ ವ್ಯಕ್ತಿಗಳ ಬಗ್ಗೆ ಮಾತ್ರವಾಗಿರದೆ, ಆಯಾಯ ಕಾಲದ ಯುಗಶಕ್ತಿ' ಎಂದೂ,ಪರಂಪರೆ' ಎಂದೂ, ವಿಕಸನದ ಬಹುಮುಖ್ಯ ಕೊಂಡಿಗಳೆಂದೂ ಕಂಡಿರುತ್ತಾರೆ.

ಕುವೆಂಪು ಅವರ ಸಾಹಿತ್ಯವನ್ನು ಓದಿದ ಯಾರಿಗಾದರೂ, ವಿಭಿನ್ನ ವಿಚಾರಧಾರೆಗಳ ನಡುವೆಯೂ ಸಮನ್ವಯ ಸೂತ್ರವನ್ನು ಕಾಣುವ 'ಪೂರ್ಣದೃಷ್ಟಿ'ಯನ್ನು ಕವಿ ಸಾಧಿಸಿರುವುದು ಮೇಲ್ನೋಟಕ್ಕೇ ಗೋಚರಿಸುತ್ತದೆ. ಪ್ರಸ್ತುತ, ಈ ಲೇಖನದಲ್ಲಿ, ಬುದ್ಧ, ಬಸವ, ಮತ್ತು ಗಾಂಧೀಜಿ – ಈ ಮೂರೂ ಸಾಧಕರನ್ನು ಕುವೆಂಪು ಹೇಗೆ ಗ್ರಹಿಸಿದ್ದಾರೆ ಹಾಗೂ ಅವರನ್ನು ತಮ್ಮ ಬರಹಗಳಲ್ಲಿ ಅಭಿವ್ಯಕ್ತಿಸಿದ್ದಾರೆ ಎಂಬುದನ್ನು ಪರಿಶೋಧಿಸುವ ಪ್ರಯತ್ನ ನಡೆಸಲಾಗಿದೆ.

**ಜ್ಞಾನದ ಬೆಳಕು; ತಂಗಾಳಿಯ ತಂಪು – ಬುದ್ಧ**

ಕುವೆಂಪು ಅವರ ಪ್ರಕಟಿತ ಬರಹಗಳಷ್ಟೆ ಅನುಲಕ್ಷಿಸಿ ಹೇಳುವುದಾದರೆ, ಕುವೆಂಪು ಅವರಿಗೆ ಮೊದಲಿಗೆ ಬುದ್ಧನ ದರ್ಶನವಾಗುವುದು, ಶ್ರೀರಾಮಕೃಷ್ಣ ಮತ್ತು ವಿವೇಕಾನಂದರ ಕೃತಿಗಳ ಮೂಲಕವೇ. ನಂತರ ಸ್ವಾಧ್ಯಯನದಿಂದ ಅವರು ಬುದ್ಧನನ್ನು ದರ್ಶಿಸಿದ್ದಾರೆ. ಕುವೆಂಪು ಅವರ ದೃಷ್ಟಿಯಲ್ಲಿ ಬುದ್ಧನನ್ನು ಪರಿಭಾವಿಸಲು ನಮಗೆ ನೆರವಾಗುವ ಕೃತಿಗಳು 'ಮಹಾರಾತ್ರಿ' – ನಾಟಕ, 'ಬುದ್ಧದೇವ' – ಸಾನೆಟ್, 'ಕಾನೂರು ಹೆಗ್ಗಡಿತಿ' – ಕಾದಂಬರಿ ಮತ್ತು ಇತರ ರಚನೆಗಳು. ಈ ಮೂರೂ ಕವಿಯ ರಾಮಕೃಷ್ಣಾಶ್ರಮ ವಾಸದ ಸಮಯದಲ್ಲಿಯೇ ರಚಿತವಾದ ಕೃತಿಗಳು. 'ಜಲಗಾರ', 'ಯಮನಸೋಲು' ಮತ್ತು 'ಮಹಾರಾತ್ರಿ' – 1927ರಲ್ಲಿ (ಆಗ ಕವಿಗೆ ಕೇವಲ 23 ವರ್ಷ) ಕೇವಲ ನಾಲ್ಕೈದು ದಿನಗಳ ಅಂತರದಲ್ಲಿ ಬರೆದ ಮೂರು ನಾಟಕಗಳು. 'ಜಲಗಾರ' ಮತ್ತು 'ಯಮನಸೋಲು' 1928ರಲ್ಲಿ ಪ್ರಕಟವಾದವು. ಆದರೆ, 'ಮಹಾರಾತ್ರಿ' 1931ರಲ್ಲಿ ಪ್ರಕಟವಾಯಿತು.[3]

ಸಿದ್ಧಾರ್ಥ ನಿರ್ಗಮನದ ಆ ರಾತ್ರಿ 'ಮಹಾರಾತ್ರಿ' ನಾಟಕವಾಗಿದೆ. ನಾಟಕದ

ವಸ್ತು, ಸುಮಾರು ಎರಡೂವರೆ ಸಾವಿರ ವರ್ಷಗಳ ಹಿಂದೆ, ಸಿದ್ಧಾರ್ಥ, ಗೌತಮ ಬುದ್ಧನಾಗಲು ಹೊರಟ ಕಥೆ. ರಚನೆಯ ಸಂದರ್ಭ– ಒಂದನೆಯ ಮಹಾಯುದ್ಧ ಕೊನೆಗೊಂಡು, ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ಉತ್ತುಂಗದಲ್ಲಿದ್ದ ಕಾಲ. ಪ್ರತಿಭಾವಂತನಾದ ಕವಿ ಕಾಲದೇಶಗಳನ್ನು ಮೀರಿ ಸಂಚರಿಸುತ್ತಾ, ತನ್ನ ಕೃತಿಗೆ ಸಾರ್ವಕಾಲಿಕತೆಯನ್ನು ತಂದುಕೊಡುತ್ತಾನೆಂಬುದಕ್ಕೆ ನಾಟಕದ ಬುದ್ಧನ ಮಾತುಗಳು ಸಾಕ್ಷಿಯನ್ನೊದಗಿಸುತ್ತವೆ.

**ಲೋಕವೇ ಬೊಬ್ಬಿರಿಯುತ್ತಿಹುದಲ್ಲ ಬೆಂದು ಬಡತನದಲ್ಲಿ,**
**ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯ ತಪ್ಪಿ,**
**ಕಾಡುಪಾಲಾಗಿಹಳು ಭಾರತಾಂಬೆಯು...**

ಇದು ಬುದ್ಧನ ಕಾಲದ ಭಾರತದ ಚಿತ್ರಣವಾಗಿರುವಂತೆಯೇ, ಸ್ವಾತಂತ್ರ್ಯ ಹೋರಾಟದ ಕಾಲದ ಭಾರತದ ಚಿತ್ರಣವೂ ಆಗಿರುವುದನ್ನು ಮನಗಾಣಬಹುದು.

ಬದುಕಿನಲ್ಲಿ ಬೆಂದವನು ಬೇಂದ್ರೆಯಾಗುತ್ತಾನೆ ಎನ್ನುವ ಮಾತು ಕನ್ನಡ ಸಾಹಿತ್ಯದಲ್ಲಿ ಚಿರಪರಿಚಿತ. ಬೆಳಗಬೇಕಾದವನು ಮೊದಲು ತೊಳಲಾಡಬೇಕಾಗುತ್ತದೆ. ಸಿದ್ಧಾರ್ಥನ ತೊಳಲಾಟವನ್ನು 'ಬುದ್ಧ'ನಾಗುವವನ ತೊಳಲಾಟ ಎಂದು ಚನ್ನ ಗುರುತಿಸುತ್ತಾನೆ. ಸಿದ್ಧಾರ್ಥ ತೊಳಗಿದರೆ ಮಾತ್ರ 'ಬುದ್ಧ'ನೆಂಬ ಬೆಳಕು ಈ ಜಗತ್ತಿಗೆ ಸಿಗುತ್ತದೆ ಎಂಬ ಅವನ ಮುಂಗಾಣ್ಕೆ ಗಮನಾರ್ಹ. ಸಿದ್ಧಾರ್ಥನನ್ನು ಮೊದಲ ಬಾರಿಗೆ 'ಗೌತಮಾ' ಎಂದು ಕರೆಯುವುದು ಇದೇ ಚನ್ನ ಎಂಬುದೂ ಗಮನಾರ್ಹ. 'ಶ್ರೀಸಾಮಾನ್ಯತೆ'ಯ ಪರಿಕಲ್ಪನೆ, ಈ ನಾಟಕದಲ್ಲಿ ಅನೈಚ್ಛಿಕವಾಗಿಯೇ ಕೆಲಸಮಾಡಿರುವುದನ್ನು ಕಾಣಬಹುದಾಗಿದೆ. ತಾಯಿ–ತಂದೆ, ಹೆಂಡತಿ–ಮಗ ಇವರನ್ನು ಬಿಟ್ಟು ಹೊರಡುವಾಗ, ಅನುಭವಿಸುವ ಸಂಕಟಕ್ಕಿಂತ ಹೆಚ್ಚು ಸಂಕಟವನ್ನು, ಚನ್ನನನ್ನು ಬೀಳ್ಕೊಳ್ಳುವಾಗ ಅನುಭವಿಸುತ್ತಾನೆ, ಸಿದ್ಧಾರ್ಥ. ಸ್ವತಃ ಬುದ್ಧನಾಗುವ ಮುಂಚೆ, ತನ್ನ ಸೇವಕನ ಕೆಲಸ–ಕಾರ್ಯಗಳಲ್ಲಿ, ಗುಣಗಳಲ್ಲಿ, ಮಾತುಗಳಲ್ಲಿ 'ಬುದ್ಧತ್ವ'ವನ್ನು ಸಿದ್ಧಾರ್ಥ ಗುರುತಿಸಿದವನಂತೆ ಚಿತ್ರಿತವಾಗಿದ್ದಾನೆ.

ಕುವೆಂಪು ಅವರ ನಂತರದ ಕವಿತೆಗಳಲ್ಲಿ, ಮಹಾಕಾವ್ಯ–ಕಾದಂಬರಿಗಳಲ್ಲಿ ಕಾಣುವ ಸರ್ವಸಮಾನತಾ ಭಾವ ಅಥವಾ ಪ್ರಜ್ಞೆ ಈ ನಾಟಕದಲ್ಲಿಯೂ ವ್ಯಕ್ತವಾಗಿದೆ. ಇದೇ ನಾಟಕದ ಜೊತೆಯಲ್ಲಿಯೇ ರಚಿತವಾಗಿ, ಮೊದಲೇ ಪ್ರಕಟಗೊಂಡ ಜಲಗಾರ ನಾಟಕವೂ ಇದಕ್ಕೆ ಹೊರತಲ್ಲ. ಏಕಕಾಲದಲ್ಲಿ, ಬೆಳಕನ್ನು ವರ್ಣಿಸಿದಂತೆ, ಕತ್ತಲೆಯನ್ನೂ ವರ್ಣಿಸಬಲ್ಲ ವಿದ್ಯೆಯನ್ನು ಪ್ರಾರ್ಥಿಸಿದಂತೆ ಅವಿದ್ಯೆಯನ್ನೂ ಪ್ರಾರ್ಥಿಸಬಲ್ಲ ದಾರ್ಶನಿಕ ಕವಿಗೆ ಮಾತ್ರ ಸಾಧ್ಯವಾಗುವ 'ಕಲಾಕರ್ಮ' ಇದು!

ಕವಿ ಅಧ್ಯಾತ್ಮವಾದಿಯಾಗಿದ್ದರೂ ವಾಸ್ತವವಾದಿಯೂ ಹೌದು. 'ಹೊಸದೋಣಿ

ಬರುವವರೆಗೂ, ಸ್ವಲ್ಪ ತೂತಾಗಿದ್ದರೂ ಹಳೆಯ ದೋಣಿಯನ್ನೇ ಆಶ್ರಯಿಸಬೇಕು' ಎಂಬ ಅರಿವು ಕವಿಗಿದೆ. 'ಶೂದ್ರತಪಸ್ವಿ' ನಾಟಕದ ವಿಷಯದಲ್ಲಿ, 'ಆಭರಣಗಳು ಹಳೆಯದಾದವೆಂದು ಅವುಗಳನ್ನು ಬಿಸಾಡುವುದಲ್ಲ, ಅವುಗಳನ್ನು ಕರಗಿಸಿ ಹೊಸ ಒಡವೆಗಳನ್ನು ಮಾಡಬೇಕು!' ಎಂದು ಅಭಿಪ್ರಾಯಪಟ್ಟಿದ್ದಾರೆ. 'ಅತಿಯಾದ ನಿರಾಕರಣೆಯೂ ಅಹಂಕಾರದ ಒಂದು ರೂಪ' ಎಂಬುದು ಕವಿಯ ಆಶಯ. ಎಲ್ಲವನ್ನೂ ನಿರಾಕರಿಸುತ್ತಾ ಹೋದರೆ, ಕೊನೆಗೆ ಉಳಿಯುವುದೇನು? ಆದ್ದರಿಂದ ನಿರಾಕರಣೆಯ ಬದಲು ಒಳಗೊಳ್ಳುವ ಬಗ್ಗೆ ಕುವೆಂಪು ಅವರಿಗೆ ಹೆಚ್ಚು ಒಲವು. ಇದು ಬುದ್ಧದೇವನ ನಡೆ ಕೂಡಾ. ಬುದ್ಧ ಯಾವುದನ್ನು ನಿರಾಕರಿಸದೆ, ಎಲ್ಲವನ್ನೂ ಒಳಗೊಳ್ಳುತ್ತಲೇ ವಿಕಸನದ ಹಾದಿ ತುಳಿಯುತ್ತಾನೆ. ಮೇಲ್ನೋಟಕ್ಕೆ ಸತಿ-ಸುತರನ್ನು, ತಂದೆ-ತಾಯಿಯನ್ನು ಬಿಟ್ಟು ಹೊರಟಿದ್ದು ನಿರಾಕರಣೆ ಎನ್ನಿಸಬಹುದು. ಆದರೆ, ವಿಶ್ವದ ಅನಂತತೆಯಲ್ಲಿ ಆ ನಿರಾಕರಣೆಯೂ ಸ್ವೀಕರಣದ ಭಾಗವಾಗಿಯೇ ಇರುತ್ತದೆ. ಇಂದು ಬುದ್ಧ ಮನುಕುಲದ ಬೆಳಕಾಗಿ ಇರುವುದರ ಹಿಂದೆ, ಎಲ್ಲವನ್ನೂ ಒಳಗೊಳ್ಳುವ ಬುದ್ಧತ್ವದ ಜೊತೆಗೆ, ಕಾರ್ಯಕಾರಣ ಸಂಬಂಧವಾದ ನಿರಾಕರಣೆಗಳೂ ಇವೆ ಎನ್ನಬಹುದು.

ಚನ್ನನಿಗೆ ಎಚ್ಚರವಾದಾಗ, ತನ್ನೆಲ್ಲಾ ಆಭರಣಗಳನ್ನು ಚನ್ನನಲ್ಲಿಯೇ ಬಿಟ್ಟು ಸಿದ್ಧಾರ್ಥ ಹೊರಟು ಹೋಗಿರುತ್ತಾನೆ. ತಾನು ಯಾರನ್ನು 'ಗೌತಮ'ನೆಂದು ಕರೆದು, ಯಾರಲ್ಲಿ 'ಬುದ್ಧ'ನನ್ನು ಕಂಡಿದ್ದನೋ, ತನ್ನ ಪ್ರಾಣವೆಂದುಕೊಂಡಿದ್ದನೋ ಆತನೇ ಇಲ್ಲ; ಆದರೆ ಬೆಲೆಬಾಳುವ ಆತನ ಒಡವೆಗಳಿವೆ. ಅವುಗಳನ್ನು ಮುಟ್ಟಲೂ ಅವನಿಗೆ ಮನಸ್ಸಾಗುವುದಿಲ್ಲ. "ತೊಲಗು ತೊಲಗಲೆ ಸಿರಿಯೆ" ಎಂದು ನಿರಾಕರಿಸುತ್ತಾನೆ (ಮುಂದೆ, ಕುವೆಂಪು 'ಕೀರ್ತಿಶನಿ ತೊಲಗಾಚೆ' ಎಂದು ಬರೆದಿರುವುದು ಗಮನಾರ್ಹ). ಆದರೆ, ನಿರಾಕರಿಸುವುದು ಅಹಂಕಾರವೆನ್ನಿಸುತ್ತದೆ, ಆತನಿಗೆ. "ನೀನಿತ್ತ ವಸ್ತುಗಳ ಒದೆಯುವವನು ಮೂಢ..." ಎಂದು, ಅವುಗಳ ಬೆಲೆಗಾಗಿ ಅಲ್ಲ, ಬುದ್ಧನು ಕೊಟ್ಟ ವರಗಳೆಂದು, ಬುದ್ಧನ ಸುಸ್ಮೃತಿಗಳೆಂದು ಭಾವಿಸಿ ಅವುಗಳನ್ನು ಸ್ವೀಕರಿಸುತ್ತಾನೆ. ಒಟ್ಟಾರೆ ಇಡೀ ನಾಟಕವು, ಅಧ್ಯಾತ್ಮದ ನೆಲೆಯಲ್ಲಿ, ಕುವೆಂಪು ಅವರಿಗೆ ಬುದ್ಧನ ಬಗೆಗಿರುವ ಬೆರಗು, ಗೌರವಗಳ ಜೊತೆಗೆ ಸಮಕಾಲೀನತೆಯನ್ನು ಆರೋಪಿಸಿರುವ ಬಹುಮಹತ್ವದ ಕಲಾಕೃತಿಯಾಗಿದೆ ಎನ್ನಬಹುದು.

1932ನೇ ಇಸವಿ, ಬುದ್ಧಪೂರ್ಣಿಮೆ ಎಂಟ್ಹತ್ತು ದಿನಗಳಿವೆ ಎನ್ನುವಾಗ, 4-5-1932ರಲ್ಲಿ 'ಬುದ್ಧದೇವ'[4] ಎಂಬ ಸಾನೆಟ್ ರಚನೆಯಾಗುತ್ತದೆ. ಬುದ್ಧಾವತಾರದ ಹಿನ್ನೆಲೆಯನ್ನು ಕವಿ-

**ಅರ್ಥವಿಲ್ಲದ ಕರ್ಮತತಿಯ ಮರುರಂಗದಲಿ**
**ಶುಷ್ಕ ಆಚಾರಸೈಕತದಲ್ಲಿ ನಡೆಗೆಟ್ಟು**

**ನಿರ್ಮಲ ವಿಚಾರನದಿ ಲಯವಾಗುತಿರೆ; ಕಟ್ಟು**
**ಕಟ್ಟಳೆಯ ಲೌಹ ಶೃಂಕಲೆಯ ಯಮಸಂಗದಲಿ**
**ಕುಬ್ಜವಾಗುತಿರಲು ಧರ್ಮದ ಮಹೋನ್ನತಿಯು...**

ಎಂದು ಚಿತ್ರಿಸಿದ್ದಾರೆ. ಆವತ್ತಿಗೆ, ವೈದಿಕ ಧರ್ಮವು ಕರ್ಮಠಾಚರಣೆಗಳಲ್ಲಿ ತೊಡಗಿ, ಜಾತಿ, ಅಸ್ಪೃಷ್ಯತೆಯ ಕೂಪದಲ್ಲಿ ಬಿದ್ದು, ಮೌಢ್ಯತೆಯನ್ನೇ ಹಾಸಿಹೊದ್ದು, ಅವನತಿಯ ಹಾದಿಯಲ್ಲಿತ್ತು. ಅಂತಹ ಸಂದರ್ಭದಲ್ಲಿ, 'ವೈರಾಗ್ಯವರ್ಷವನ್ನು ಕರೆದು, ಜನರಲಿ ಮತಿಯು, ಶ್ರುತಿಯ ಬಂಡೆಯ ಬಿರಿದು ಮೂಡುವಂತೆ ಬುದ್ಧನ ಅವತಾರವಾಯಿತು' ಎನ್ನುತ್ತಾರೆ. ಕೊನೆಯ ಸಾಲುಗಳು "ಮತದ ಮತಿಹೀನತೆಯು ಸಾಕೆಮಗೆ; ಬೇಕು ಸನ್ಮತಿಯ ನಾಗರಿಕತೆಯು: ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ?" ಎಂಬುದು ಕೇವಲ ಈ ಸಾನೆಟ್ಟಿನ ಆಶಯ ಮಾತ್ರವಾಗಿರದೆ, ಮುಂದೆ ಕುವೆಂಪು ಅವರಿಂದ ರಚಿತವಾಗಬೇಕಿದ್ದ ಹಲವಾರು ಕವಿತೆಗಳಿಗೆ, ಮಹಾಕಾವ್ಯ, ಕಾದಂಬರಿಗಳಿಗೆ ಬರೆದ ಆಶಯನುಡಿಯೂ ಆಗಿದೆ ಎನ್ನಬಹುದು.

"ನಿನಗೆ ನೀನೇ ಬೆಳಕು" ಎನ್ನುತ್ತಾನೆ, ಬುದ್ಧ. ಹಾಗೆಯೇ, ಇತಿಹಾಸದ ಬೆಳಕಿನಲ್ಲಿ ನೋಡಿದರೆ ಬುದ್ಧ, ಬೆಳಕು ಮತ್ತು ಜ್ಞಾನ (ವಿವೇಕ) ಇವುಗಳ ನಡುವೆ ಅಭೇದ್ಯವಾದ ಸಂಬಂಧವೇರ್ಪಟ್ಟಿರುವುದನ್ನು ಕಾಣಬಹುದು. (ಶ್ರೀರಾಮಕೃಷ್ಣರು ನರೇಂದ್ರನಿಗೆ ವಿವೇಕಾನಂದ ಎಂದು ನಾಮಕರಣ ಮಾಡಿದ್ದನ್ನೂ ಇಲ್ಲಿ ಪರಿಭಾವಿಸಬಹುದಾಗಿದೆ). ಹಾಗೆ ನೋಡಿದರೆ, ಜ್ಞಾನವೇ ಬೌದ್ಧಧರ್ಮದ ಅಡಿಗಲ್ಲು. 'ನಿನಗೆ ನೀನೇ ಬೆಳಕು' ಎಂಬ ಬುದ್ಧನ ಉಪದೇಶ ಇಲ್ಲಿ 'ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ?' ಎಂಬ ಮಾತುಗಳಲ್ಲಿ ವ್ಯಕ್ತವಾಗುತ್ತದೆ.

ಈ ನಿಟ್ಟಿನಲ್ಲಿ, ಎರಡು ವರ್ಷಗಳ ನಂತರ (23-1-1934) ರಚಿತವಾಗಿರುವ 'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?'[5] ಕವಿತೆಯನ್ನು ನೋಡಬಹುದು.

**'ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?...**
**ನಿನ್ನೆದೆಯ ದನಿಯೆ ಋಷಿ! ಮನು ನಿನಗೆ ನೀನು...**
**ಎದೆಯ ದನಿ ಧರ್ಮನಿಧಿ...**
**ನಮ್ಮ ಹೃದಯವೇ ನಮಗೆ ಧರ್ಮಸೂತ್ರ'**

ಇಂತಹ ಸಾಲುಗಳೊಂದಿಗೆ, ಇಡೀ ಕವಿತೆಯೆ ಆ ಸಾನೆಟ್ಟಿನ ಸಾರವನ್ನು ವಿಸ್ತರಿಸಿದೆ ಎನ್ನಬಹುದು. ಇದೇ ಮಾತುಗಳನ್ನು 29-10-1935ರ ರಚನೆಯಾಗಿರುವ 'ಓ, ಬನ್ನಿ, ಸೋದರರೆ, ಬೇಗ ಬನ್ನಿ!' ಕವಿತೆಗೂ ಅನ್ವಯಿಸಬಹುದು.

**'ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,**
**ವಿಜ್ಞಾನ ದೀವಿಗೆಯ ಹಿಡಿಯಬನ್ನಿ...**
**ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ;**
**ಮತಿಯಿಂದ ದುಡಿಯಿರೈ ಲೋಕಹಿತಕೆ'**

ಇವು, ಬುದ್ಧನ ಆಶಯದ ಘೋಷಣೆಗಳೂ ಆಗಿವೆ ಎನ್ನಬಹುದು. ಈ ಕವಿತೆಯಲ್ಲಿ, ಕವಿ ಆಹ್ವಾನಿಸುತ್ತಿರುವುದು 'ವಿಶ್ವಪಥ'ಕೆ ಬನ್ನಿ ಎಂದು. ಆ ವಿಶ್ವಪಥ 'ಬುದ್ಧಪಥ'ವೂ ಹೌದು ಎಂಬುದು ನಿಸ್ಸಂಶಯ.

ಸ್ವಾಮಿ ವಿವೇಕಾನಂದರ, ಪ್ರಸಿದ್ಧ 'ಲಾಹೋರ್ ಉಪನ್ಯಾಸ'ವನ್ನು 1934ರಲ್ಲಿ ಕುವೆಂಪು ಕನ್ನಡಕ್ಕೆ ಅನುವಾದಿಸಿದ್ದಾರೆ.[6] ಅದರಲ್ಲಿನ "ಬುದ್ಧ'ನು 'ವಿಕಸನ'ದ ಸರಪಣಿಯ ಒಂದು ಕೊಂಡಿಯಾದರೆ 'ಅಮೀಬಾ'ವು ಕೂಡ ಬುದ್ಧನಾಗಿರಲೇಬೇಕು. (ಅವ್ಯಕ್ತರೀತ್ಯಾ ) 'ಬುದ್ಧ'ನು ವ್ಯಕ್ತವಾದ 'ಅಮೀಬಾ'ವಾದರೆ 'ಅಮೀಬಾ'ವು ಅವ್ಯಕ್ತವಾದ ಬುದ್ಧನಾಗಿರಬೇಕು" ಎಂಬ ಮಾತುಗಳ ತಾತ್ಪರ್ಯ ಕುವೆಂಪು ಸಾಹಿತ್ಯದಲ್ಲಿ ಸಾಕಷ್ಟು ಕಡೆ ವ್ಯಕ್ತವಾಗಿರುವುದನ್ನು ನೋಡಬಹುದಾಗಿದೆ. 'ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ', 'ಸೃಷ್ಟಿಯ ಮಹದ್ವ್ಯೂಹದಲ್ಲಿ ಮರದ ತುದಿಯ ಹೂವೆಷ್ಟು ಮುಖ್ಯವೋ, ಗೊಬ್ಬರವೂ ಅಷ್ಟೇ ಮುಖ್ಯ', 'ಯಾವುದು ಎಲ್ಲಿಯೂ ನಿಲ್ಲುವುದಿಲ್ಲ', 'ಜಡವೆಂಬುದೇ ಇಲ್ಲ; ಚೈತನ್ಯವೇ ಎಲ್ಲ', 'ಸರ್ವವೂ ಊರ್ಧ್ವಮುಖಿಯಾಗಿ ಉದ್ಧಾರ(ವಿಕಸನ)ಪಥದಲ್ಲಿಯೇ ಇರುತ್ತದೆ' ಎಂಬಿತ್ಯಾದಿ ಅವರ 'ಪೂರ್ಣದೃಷ್ಟಿ'ಕೋನದ ಮಾತುಗಳನ್ನು ಈ ನಿಟ್ಟಿನಲ್ಲಿ ಗಮನಿಸಬಹುದಾಗಿದೆ. ಬುದ್ಧ, ಕಣ್ಣೆದುರಿಗಿನ ವಸ್ತುಸತ್ಯವನ್ನೇ ನಿರಾಕರಿಸಿ, ಕಾಣುವುದು ಸಂಯೋಜಿತ ಸತ್ಯ ಮಾತ್ರ. ಅದಕ್ಕೊಂದು ಶಾಶ್ವತರೂಪ ಇಲ್ಲ ಎನ್ನುತ್ತಾನೆ. ಅದನ್ನೇ ಕುವೆಂಪು, ಒಳಿತು ಮತ್ತು ಕೆಡುಕುಗಳು ನಿತ್ಯವಸ್ತುವಲ್ಲ; ಅವು ನಿರಂತರ ಬದಲಾವಣೆ ಕಾಣುವಂತವು. ಆಧ್ಯಾತ್ಮಿಕವಾಗಿ ಊರ್ಧವಮುಖಿಯಾಗಿರುತ್ತವೆ ಎನ್ನುತ್ತಾರೆ. ಅವರ, 'ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ವ್ಯೂಹ ರಚನೆಯೊಳ್' ಎಂಬ ಮಾತನ್ನು ಈ ನಿಟ್ಟಿನಲ್ಲಿ ಗಮನಿಸಬಹುದಾಗಿದೆ.

ವಿಚಾರವಂತರೂ, ವೈಜ್ಞಾನಿಕ ಮನೋಧರ್ಮವುಳ್ಳವರು ಆಗಿದ್ದ ಕುವೆಂಪು ದೇವರನ್ನೂ ಪೂಜಿಸುತ್ತಿದ್ದರು. ಆದರೆ, ಅವರೆಂದೂ ಪೂಜೆಗೆಂದು ದೇವಸ್ಥಾನಕ್ಕೆ ಹೋದವರಲ್ಲ ಎಂಬುದು ಗಮನಾರ್ಹ. ಇದು ಬಸವಮಾರ್ಗವೂ ಹೌದು. 'ನನ್ನ ದೃಷ್ಟಿಯಲ್ಲಿ ದೇವರು ಬೇರೆಯಲ್ಲ; ಪ್ರಕೃತಿ ಬೇರೆಯಲ್ಲ' ಎಂದು ಮತ್ತೆ ಮತ್ತೆ ಹೇಳಿದ್ದಾರೆ. ದೇವರ ವಿಷಯದಲ್ಲಿ ಅವರಿಗೆ, ಅವರ ನಡವಳಿಕೆಯ ಬಗ್ಗೆ ಯಾವುದೇ ಗೊಂದಲವಿರಲಿಲ್ಲ. "ಬುದ್ಧ ಯೇಸು ಶಂಕರ ಶ್ರೀರಾಮಕೃಷ್ಣಪರಮಹಂಸ ಶ್ರೀಅರವಿಂದರ ಕಲ್ಪನೆಯಲ್ಲಿ ದೇವರ ಅಥವಾ ಪೂಜೆಯ ಕಲ್ಪನೆ ತೀರಾ ಭಿನ್ನವಾಗಿರುತ್ತದೆ"[7] ಎನ್ನುತ್ತಾರೆ. ಹಾಗೆಯೇ ಅವರ ದೇವರ ಕಲ್ಪನೆಯೂ ಭಿನ್ನವಾಗಿತ್ತು. ಕೆಲವರು 'ದುಡಿಮೆಯೇ ದೇವರು' ಎಂದರು; 'ಸತ್ಯವೇ ದೇವರು' ಎಂದರು; ಕೆಲವರು ಅದರ ಜೊತೆಗೆ ಸೌಂದರ್ಯವನ್ನು ಸೇರಿಸಿದರು. ಕುವೆಂಪು ತಮ್ಮ ದೇವರನ್ನು ಪ್ರಕೃತಿಯಲ್ಲಿ ಕಂಡರು. ಈ ವಿಷಯದಲ್ಲಿ, ಕುವೆಂಪು ಅವರಿಗೆ ಬುದ್ಧನೇ ಗುರು

ಎನ್ನಬಹುದು. "ದೇವರ ವಿಷಯವೆತ್ತಿದಾಗ, ಬುದ್ಧನ ವಕ್ತ್ರದಿಂದ ಒಂದು ಮಾತೂ ಬರುವುದಿಲ್ಲ. ಇಲ್ಲವೆನ್ನಲೂ ಇಲ್ಲ. ಪರಮಸಿದ್ಧಿಯನ್ನು ಪಡೆದಾತನ ಲಕ್ಷಣವದು"[8] ಎನ್ನುತ್ತಾರೆ. ದೇವರ ವಿಷಯವಾಗಿ ಶಂಕರರಂತವರು ಸಾವಿರಾರು ಪುಟಗಳನ್ನು ಬರೆದರು. ಆದರೆ ಬುದ್ಧ ಆ ಬಗ್ಗೆ ಮಹಾಮೌನಿಯಾಗುತ್ತಾನೆ. ಈ ವಿಷಯದಲ್ಲಿ ನಿಸ್ಸಂಶಯವಾಗಿ ಕುವೆಂಪು ಬುದ್ಧನನ್ನು ಅನುಸರಿಸುತ್ತಾರೆ. ಈ ನಿಟ್ಟಿನಲ್ಲಿ 'ಕಾನೂರು ಹೆಗ್ಗಡಿತಿ' ಕಾದಂಬರಿಯ 'ಹೂವಯ್ಯ'ನ ಪಾತ್ರ ನಮಗೆ ಸಾಕ್ಷಿರೂಪದಲ್ಲಿ ದಕ್ಕುತ್ತದೆ ಎನ್ನಬಹುದು.

17–9–1933ರ ದಿನಚರಿಯಲ್ಲಿ, ನಾನೊಂದು ಕಾದಂಬರಿಗೆ ವಸ್ತು ಸಂವಿಧಾನ ಪ್ರಾರಂಭಿಸಿದೆ ಎಂದು ಬರೆದಿದ್ದಾರೆ.[9] ಅದಾಗಿ ಎರಡೇ ದಿನಗಳಲ್ಲಿ ಬರೆಯಲು ಪ್ರಾರಂಭಿಸಿದ ಕಾದಂಬರಿ 'ಕಾನೂರು ಹೆಗ್ಗಡಿತಿ'. ಅದು ಪೂರ್ಣಗೊಂಡು ಪ್ರಕಟವಾಗಿದ್ದು 1936 ಡಿಸೆಂಬರಿನಲ್ಲಿ. ಕಾದಂಬರಿಯಲ್ಲಿ, ಕಥಾನಾಯಕ ಹೂವಯ್ಯ, ಕೊನೆಯಲ್ಲಿ ಬುದ್ಧ(ಜ್ಞಾನ)ಮಾರ್ಗವನ್ನು ಹಿಡಿಯುತ್ತಾನೆ. ಇಲ್ಲಿ ಬುದ್ಧನೇ ಏಕೆ? ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಹೂವಯ್ಯ ಹುಟ್ಟಿ ಬೆಳೆದ ಪರಂಪರೆ, ಮತ್ತು ಆತನ ಅಧ್ಯಯನ ಕಕ್ಷೆಗೆ ಹೆಚ್ಚು ಒಳಪಟ್ಟ ಮತ–ಧಾರ್ಮಿಕ ಮಹಾಪುರುಷರಾಗಲೀ ವಿಚಾರಧಾರೆಗಳಾಗಲೀ ಏಕಿಲ್ಲ? ವೈದಿಕ ದೇವರುಗಳೇಕಿಲ್ಲ?

ಕೊನೆಯ ಐದು ಅಧ್ಯಾಯಗಳನ್ನು ಬಿಟ್ಟು, ಕಾದಂಬರಿಯ ಮೊದಲ 76 ಅಧ್ಯಾಯಗಳಲ್ಲಿ ತುಂಬಿತುಳುಕುವ ಸಮೃದ್ಧ ಜನಜೀವನವನ್ನು ಕಾಣಬಹುದು. ಆದರೆ, ಆ ಸಮೃದ್ಧತೆ ಕೇವಲ ಭೋಗಿಕ ವಸ್ತುಗಳಿಗೆ ಮಾತ್ರ ಸೀಮಿತವಾಗಿತ್ತೇ ಹೊರತು, ಮಾನವ ಸಹಜ ಬಂಧುತ್ವ, ಸಹಬಾಳ್ವೆ, ಪ್ರೇಮ, ಕರುಣೆ, ಸಂತೋಷ ಇವೆಲ್ಲವೂ ಅಲ್ಲಿ ನಗಣ್ಯ. ಸ್ವಾರ್ಥ, ದುರಾಸೆ, ಮೌಢ್ಯ, ಕಂದಾಚಾರ, ಅಜ್ಞಾನ, ಅವಿದ್ಯೆಗಳೇ ಅಲ್ಲಿ ತುಂಬಿ ತುಳುಕುತ್ತವೆ. ಬಹುತೇಕ ಇಂಥದೇ ಪರಿಸ್ಥಿತಿ, ಸಿದ್ಧಾರ್ಥ ಬುದ್ಧನಾಗುವುದಕ್ಕೆ ವೇದಿಕೆ ಸಿದ್ಧಪಡಿಸಿದ್ದನ್ನು ಬುದ್ಧನ ಜೀವನಗಾಥೆಯಲ್ಲಿ ಕಾಣಬಹುದು. ಕಾದಂಬರಿಯಲ್ಲಿಯೂ ಹೂವಯ್ಯ ಅಂಥದೇ ಪರಿಸ್ಥಿತಿಯ ವಿರುದ್ಧ ಈಜಿಕೊಂಡೇ ಬಂದಿರುತ್ತಾನೆ. ಅಲ್ಲಿ ಸಿದ್ಧಾರ್ಥ ಬೆಳಗುವುದಕ್ಕೋಸ್ಕರ ತೊಳಗಿದಂತೆ, ಇಲ್ಲಿ, ಮುಂದೆ ಬೆಳಗುವುದಕ್ಕೋಸ್ಕರ ಹೂವಯ್ಯನೂ ತೊಳಗುತ್ತಿರುವುದನ್ನು ಮನಗಾಣಬಹುದು. ಆಗಲೇ ಧುತ್ತನೆ 'ಬುದ್ಧದೇವನ ಕೃಪಾಮಹಿಮೆ' ಎಂಬ ಹೊಸ ಅಧ್ಯಾಯ, ಆ ಮಲೆನಾಡಿನ ಕೊಂಪೆಯಲ್ಲಿ ಪ್ರಾರಂಭವಾಗುತ್ತದೆ, ಹೊಸದಾಗಿ! ಹೂವಯ್ಯನ ತೊಳಲಾಟಕ್ಕೆ, ಬುದ್ಧ ಮಾತ್ರ ಬೆಳಕಾಗಬಲ್ಲ!

ಇಲ್ಲಿಯ ಹೂವಯ್ಯ, 'ಬುದ್ಧತ್ವ'ವನ್ನು ಆವಾಹಿಸಿಕೊಂಡಿದ್ದರೂ ತನ್ನ ಸುತ್ತಲಿನ ಯಾವುದನ್ನೂ ಆತ ನಿರಾಕರಿಸುವುದಿಲ್ಲ ಎಂಬುದು ಗಮನಾರ್ಹ. ತನ್ನೊಳಗೇ

ನಡೆಯುತ್ತಿದ್ದ ಬಹುದೊಡ್ಡ ಹೋರಾಟವನ್ನು ಗೆಲ್ಲುತ್ತಲೇ, ಮುಂದೆ ಎದುರಾದ ಸೇರೆಗಾರರ ದ್ರೋಹ, ಸುಬ್ಬಮ್ಮನ ದಾರೂಣಸ್ಥಿತಿ–ಸಾವು, ಪ್ರೀತಿಯ ಸಹೋದರ ರಾಮಯ್ಯನ ಆತ್ಮಹತ್ಯೆ ಇವೆಲ್ಲವನ್ನೂ ಸಮಚಿತ್ತದಿಂದ ಎದುರಿಸುತ್ತಲೇ, ಅವಕಾಶ ದೊರೆತಾಗಲೆಲ್ಲಾ ತನ್ನನ್ನು ತಾನು 'ಕಂಡು'ಕೊಳ್ಳುತ್ತಲೇ ಬುದ್ಧತ್ವದೆಡೆಗೆ ಸಾಗುತ್ತಾನೆ. ಪುಟ್ಟಣ್ಣನ ಮೃಗಯಾ ಬೇಟೆಗೆ ಗುಂಡುಗಳನ್ನು ಕೊಡುವುದರಲ್ಲಾಗಲಿ, ಕುಡಿದು ದಾರಿಯಲ್ಲಿ ಬಿದ್ದ ನಂಜನನ್ನು ಸಂಬಾಳಿಸುವುದರಲ್ಲಾಗಲಿ, ಮುಂದೆ, ಜೀವನಾಧಾರವಾಗಿದ್ದ ಕೃಷಿ ಚಟುವಟಿಕೆಗಳಿಗಾಗಿ ಆಳುಗಳನ್ನು ಕರೆತರಲು ಹೊಸ ಸೇರೆಗಾರ ಸೋಮಯ್ಯಶೆಟ್ಟರಿಗೆ ದುಡ್ಡು ಕೊಡುವುದರಲ್ಲಾಗಲೀ, ಮುತ್ತಳ್ಳಿ ಮನೆಯ ಸಂತೋಷದಲ್ಲಿ ಭಾಗಿಯಾಗುವುದರಲ್ಲಾಗಲೀ ಹೂವಯ್ಯ ಯಾವುದನ್ನೂ ನಿರಾಕರಿಸುವುದಿಲ್ಲ. ತನ್ನ ದೈನಂದಿನ ಯಾವ ಚಟುವಟಿಕೆಯನ್ನೂ ನಿಲ್ಲಿಸದೆ, ನಿತ್ಯಜೀವನದ ಭಾಗವಾಗಿದ್ದ ಕರ್ಮಗಳನ್ನು ನಿರಾಕರಿಸದೆ, ಅವೆಲ್ಲವನ್ನೂ ಸಂಸ್ಕರಿಸುತ್ತ ತಾನೂ 'ತಿಳಿ'ಗೊಳ್ಳುತ್ತಾ 'ಬುದ್ಧತ್ವ'ದೆಡೆಗೆ ಸಾಗುವುದನ್ನು ಕಾಣಬಹುದು. ಯಾವ ಜಾಗದಲ್ಲಿ ಕಳ್ಳು ಕಾಯಿಸಿ ಕುಡಿಯುತ್ತಿದ್ದರೊ ಅದೇ ಕಾನುಬೈಲಿನಲ್ಲಿ 'ಜ್ಞಾನ'ದ ಬೆಳಕು ಪಸರಿಸುವುದು ಈ 'ಸಂಸ್ಕರಣ'ಕ್ಕೆ ಸಾಂಕೇತಿಕವಾಗಿದೆ. ವಿದ್ಯಾವಂತನಾದ ಹೂವಯ್ಯನ ಬುದ್ಧತ್ವದೆಡೆಗಿನ ನಡೆ, ಅವಿದ್ಯಾವಂತನಾದ ಬಾಡುಗಳ್ಳ ಸೋಮ, ಸೇರೆಗಾರ ಸೋಮಯ್ಯಶೆಟ್ಟರಾಗಿ ಬದಲಾಗಲು ಕಾರಣವಾಗುತ್ತದೆ. ವಿದ್ಯೆಯನ್ನು ಅನುಸರಿಸಿದ ಅವಿದ್ಯೆಯೂ ಗೌರವಾರ್ಹ! ಸಂಸ್ಕೃತಿಯಿಲ್ಲದ, ಸಂಸ್ಕೃತಿಗಾಗಿಯಲ್ಲದ ವಿರಾಮ ನರಕಕ್ಕೆ ದಾರಿ ಎಂಬುದು ಹೂವಯ್ಯನಿಗೆ ದರ್ಶನವಾಗಿತ್ತು. ಕೊನೆಯಲ್ಲಿ ಬರುವ ಬುದ್ಧಜಯಂತಿ ಆಚರಣೆ ವಿರಾಮಜೀವನದ ಭಾಗವಾಗಿರಲಿಲ್ಲ; ಸಂಕೇತಮಾತ್ರವಾಗಿತ್ತು. ಆದ್ದರಿಂದಲೇ ಸಹ್ಯಾದ್ರಿಯ ಶೃಂಗಾಳಿಯ ಮೇಲೆ ಉದಯವಾಗುವುದು ಬುದ್ಧನದೋ ಅಥವಾ ಮತ್ತಾವ ದೇವರ, ಮಹಾಪುರುಷನ ಮಾನವ ಕಲ್ಪಿತ ರೂಪವೋ ಅಲ್ಲ. ನೂತನ ಯುಗದೇವತೆ! ಆ ದೇವತೆ ಮಿಥ್ಯೆಯ ಮೌಢ್ಯತೆಯನು ಸೀಳಿ ಜ್ಞಾನದ ವಿಜ್ಞಾನದ ಮತಿ ಖಡ್ಗವನ್ನು ಹಿಡಿದಿರುವ, ಮನಸ್ಸಿಗೆ ತಂಪು ನೀಡುವ ತಂಗಾಳಿ! ಕುವೆಂಪು ದೃಷ್ಟಿಯಲ್ಲಿ, 'ಬುದ್ಧನೆಂದರೆ ಜ್ಞಾನದ ಬೆಳಕು ಮತ್ತು ತಂಗಾಳಿಯ ತಂಪು!'

**ದೇವರಡಿಯ ತಣ್ಜೋಡರು – ಬಸವಣ್ಣ**

ಬುದ್ಧನನ್ನು 'ಬೆಳಕು' ಮತ್ತು 'ತಂಗಾಳಿ'ಯ ರೂಪದಲ್ಲಿ ದರ್ಶಿಸುವ ಕವಿಪ್ರತಿಭೆ, ಬಸವಣ್ಣನವರಿಗೆ, 'ತಣ್ಜೋಡರು' ಎಂಬ ರೂಪಕವನ್ನು ಸೃಷ್ಟಿಸಿದೆ. ತಣ್ಣನೆಯ ದೀಪ 'ಬೆಂಕಿ'ಯಾಗಿ ಸುಡಲೂಬಲ್ಲದು, 'ತಂಗಾಳಿ'ಯಾಗಿ ತಂಪನ್ನೀಯಲೂಬಹುದು! 1953ರಲ್ಲಿ ಪ್ರಕಟವಾದ ವಿಭೂತಿಪೂಜೆ ಪುಸ್ತಕದ 'ವಚನಕಾರ ಬಸವೇಶ್ವರರು' ಎಂಬ (ರಚನಾ ದಿನಾಂಕ ಸ್ಪಷ್ಟವಿಲ್ಲ) ಲೇಖನ ಮತ್ತು ದಿನಾಂಕ 27–1–1968 ರಲ್ಲಿ ರಚಿತವಾಗಿರುವ 'ಶ್ರೀ ಬಸವೇಶ್ವರರಿಗೆ' ಕವಿತೆ ಕುವೆಂಪು ಅವರು ಬಸವಣ್ಣನವರ ಬಗ್ಗೆ

ಬರೆದಿರುವ ಎರಡು ಬರಹಗಳು. ಇವುಗಳಲ್ಲದೆ, ಗದ್ಯಲೇಖನಗಳಲ್ಲಿ, ಸಂದರ್ಶನ–ಭಾಷಣಗಳಲ್ಲಿ ಬಸವಣ್ಣನವರ ಮಹತ್ವವನ್ನು ದಾಖಲಿಸಿದ್ದಾರೆ.

ಬುದ್ಧ–ಗಾಂಧಿಯವರಿಗೆ ಹೋಲಿಸಿದರೆ, ಕುವೆಂಪು ಬಸವಣ್ಣನವರನ್ನು ಎದುರುಗೊಂಡಿದ್ದು ಸ್ವಲ್ಪ ಕಡಿಮೆ ಎಂದೇ ಹೇಳಬೇಕು. ಅದಕ್ಕೆ ಅಂದಿನ ಕರ್ನಾಟಕದ ಭೌಗೋಳಿಕ ಸಂರಚನೆಯೂ ಕಾರಣವಿದ್ದಿರಬೇಕು. ಆದರೆ, ಈ 'ಕಡಿಮೆ' ಸಂಖ್ಯಾದೃಷ್ಟಿಯಿಂದ ಹೊರತೇ ಮಹತ್ವದ ದೃಷ್ಟಿಯಿಂದಲ್ಲ ಎಂಬುದನ್ನು ಮನಗಾಣಬಹುದಾಗಿದೆ. ಏಕೆಂದರೆ, ಪ್ರಾರಂಭದಲ್ಲಿಯೇ ಪ್ರಸ್ತಾಪ ಮಾಡಿದಂತೆ, ಬುದ್ಧನ ಜೊತೆಜೊತೆಗೇ ಬಸವಣ್ಣನನ್ನು ಕುವೆಂಪು ಉಲ್ಲೇಖಿಸುತ್ತಾರೆ. ಭಾರತದ ಮಟ್ಟಿಗೆ ಮೌಢ್ಯದಿಂದ ಪಾರುಮಾಡಲು ನಡೆದ ಎರಡು ಪ್ರಯತ್ನಗಳು 'ಒಂದು ಬುದ್ಧನದಾದರೆ, ಇನ್ನೊಂದು ಬಸವಣ್ಣನದು' ಎಂದಿದ್ದಾರೆ. ಸಮಾಜ ಸುಧಾರಕರ ವಿಷಯ ಬಂದಾಗ, "ಸಮಾಜ ಸುಧಾರಣೆಯ ದೃಷ್ಟಿಯಿಂದ ಬಸವೇಶ್ವರರು, ಸಾಕ್ಷಾತ್ಕಾರದ ದೃಷ್ಟಿಯಿಂದ ಬುದ್ಧ" ಎಂಬುದು ಅವರ ಖಚಿತಾಭಿಪ್ರಾಯ ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಬುದ್ಧನಂತೆಯೇ ಬಸವಣ್ಣನೂ ಸಾಕಷ್ಟು ತೊಳಗಿ ಬೆಳಗಿದ ಮಹಾತ್ಮನೇ ಆಗಿದ್ದಾನೆ. ಆತನ ಹೋರಾಟವೂ ಸಮಾಜದಲ್ಲಿನ ಅಸಮಾನ ವ್ಯವಸ್ಥೆ ಮತ್ತು ಮೌಢ್ಯದ ವಿರುದ್ಧವೇ ಆಗಿತ್ತು. ಬಸವನ ನುಡಿಬೆಳಕಿನಲ್ಲಿ ಬಿಡುಗಡೆಯ ಮಾರ್ಗವಿದೆ ಎಂಬುದರ ಅರಿವು ಕುವೆಂಪು ಅವರಿಗಿತ್ತು.

'ಮರವನ್ನು, ಎಲೆಗಳನ್ನು ಸಿಕ್ಕಿಸಿಕೊಂಡಿರುವ ಕೋಲು ಎಂದು ವರ್ಣಿಸಿದಂತಾಗುತ್ತದೆ' ಎಂದು ಹೇಳುವ ಮೂಲಕ ಬಸವಣ್ಣನವರನ್ನು ವಚನಕಾರ ಎಂದಷ್ಟೇ ಕರೆಯುವುದನ್ನು ನಿರಾಕರಿಸಿ, 'ಆಚಾರ್ಯಪುರುಷ' ಎಂದೇ ಪರಿಭಾವಿಸಿದ್ದಾರೆ.[10] ಏಕಕಾಲಕ್ಕೆ, 'ಸಮಾಜ' ಮತ್ತು 'ಅಧ್ಯಾತ್ಮ' ಕ್ಷೇತ್ರಗಳೆರಡರಲ್ಲಿಯೂ ಕ್ರಾಂತಿಯನ್ನುಂಟು ಮಾಡಿದ್ದು ಬಸವಣ್ಣ ಎಂಬುದನ್ನು ಮನಗಾಣಿಸಿದ್ದಾರೆ.[11] ಸಮಾಜ ಸುಧಾರಣೆಯ ವಿಷಯಕ್ಕೆ ಬಂದರೆ, 'ಮಾರ್ಕ್ಸ್ ಬಸವೇಶ್ವರರಿಬ್ಬರೂ ವಿಶ್ವಮಾನವರೇ! ಆದರೆ ಬಸವೇಶ್ವರರ ಸಂದೇಶ ಮಾರ್ಕ್ಸ್ ಸಂದೇಶಕ್ಕಿಂತ ವ್ಯಾಪಕವಾದದ್ದು'[12] ಎನ್ನುತ್ತಾರೆ.

ಅದುವರೆಗಿನ ದೇವರ ಕಲ್ಪನೆಯನ್ನೂ, ದೇವಾಲಯ ವ್ಯವಸ್ಥೆಯನ್ನು ಸಾರಸಗಟಾಗಿ ನಿರಾಕರಿಸಿ, ಇಷ್ಟಲಿಂಗ ಪರಿಕಲ್ಪನೆಯನ್ನು ತಂದು, ಅದನ್ನು ಸಮಾಜದ ಎಲ್ಲ ವರ್ಗದ ವರ್ಣದ ಜನರು, ಜಾತಿ–ಲಿಂಗ ಭೇದವಿಲ್ಲದೆ ಪೂಜಿಸುವ ಅಧ್ಯಾತ್ಮಿಕ ಸ್ವಾತಂತ್ರ್ಯದ ವಾತಾವರಣವನ್ನು ಬಸವಣ್ಣ ಸೃಷ್ಟಿಸುತ್ತಾನೆ. ಅದಕ್ಕಾಗಿ ಆಗಿನ ಉನ್ನತವರ್ಗದವರನ್ನು ಎದುರು ಹಾಕಿಕೊಂಡು ಅಂತರ್ಜಾತಿ ಮದುವೆ ನಡೆಸುತ್ತಾನೆ. ಮಾದಾರ ಚೆನ್ನಯ್ಯನಂತಹ ಹಲವಾರು ಶ್ರೀಸಾಮಾನ್ಯರನ್ನು ಬೆಳಕಿಗೆ ತಂದಿದ್ದಲ್ಲದೆ,

ಅಂತವರ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೂ ಬಸವಣ್ಣನವರೇ ಕಾರಣ ಎಂಬುದನ್ನು ಕುವೆಂಪು ಮನಗಂಡಿದ್ದಾರೆ. ಕುವೆಂಪು ಅವರು ಈ ದೃಷ್ಟಿಯಿಂದಲೇ ಬಸವಣ್ಣನನ್ನು ತಮ್ಮ ಸಮಾಜ ಸುಧಾರಣೆಯ ಆಲೋಚನೆಗಳಿಗೆ ಪ್ರಮುಖವಾಗಿ ಉಲ್ಲೇಖಿಸುತ್ತಾರೆ. 'ಸಗಣಿ ಆಯಲು ಹೋದ ಹೊಲೆಯ ಹೊಲತಿಯರಿಗೆ ನಾನು ಹುಟ್ಟಿದೆ' ಎಂದು ತಮ್ಮನ್ನು ತಾವು ನಿರ್ವ್ಯಕ್ತೀಕರಣಗೊಳಿಸಿಕೊಳ್ಳುವ ಬಸವಣ್ಣ ಆಧ್ಯಾತ್ಮಿಕ ಲೋಕದ ಸಮಾನತಾವಾದಿಯಾಗಿ ಕಂಡಿದ್ದಾನೆ.[13]

ಇಲ್ಲಿಯೇ ಗಮನಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ, ಕುವೆಂಪು ಅವರ 'ವಿಶ್ವಮಾನವ ಸಂದೇಶ' ಮತ್ತು ಬಸವಣ್ಣನ 'ಇಷ್ಟಲಿಂಗ' ಪರಿಕಲ್ಪನೆಗಳಲ್ಲಿರುವ ಸಾಮ್ಯತೆ. ಅಸಮಾನತೆಯ ಗೂಡಾಗಿದ್ದ ಇಡೀ ದೇವಾಲಯ ವ್ಯವಸ್ಥೆಯನ್ನೇ ನಿರಾಕರಿಸಿ, 'ಎನ್ನ ಕಾಲೇ ಕಂಬ, ದೇಹವೇ ದೇಗುಲ' ಎಂದು, ಇಷ್ಟಲಿಂಗಧಾರಣೆಯ ಮೂಲಕ ಜಾತಿ–ಲಿಂಗಬೇಧಗಳಿಲ್ಲದೆ ಯಾರು ಬೇಕಾದರೂ ಅಧ್ಯಾತ್ಮಿಕವಾಗಿ ಉನ್ನತಿ ಸಾಧಿಸಲು ಬಸವಣ್ಣ ಅವಕಾಶ ಕಲ್ಪಿಸುತ್ತಾನೆ. ಇತ್ತ, 'ಅಧ್ಯಾತ್ಮದ ವೈಯಕ್ತೀಕರಣವೇ ವಿಶ್ವಮಾನವ ಸಂದೇಶದ ಅರ್ಥ'[14] ಎಂದು ಕುವೆಂಪು ಸಾರುತ್ತಾರೆ. ಇಲ್ಲಿಯೂ ಜಾತಿ–ಲಿಂಗಬೇಧಗಳಿಲ್ಲದೆ, ಸಾಂಸ್ಥಿಕ ಮತ–ಧರ್ಮಗಳ, ದೇವಾಲಯ–ಮಧ್ಯವರ್ತಿಗಳ ಗೊಡವೆಗಳಿಲ್ಲದೆ ಯಾರು ಬೇಕಾದರೂ ಆಧ್ಯಾತ್ಮಿಕ ಉನ್ನತಿ ಸಾಧಿಸಲು ವಿಶ್ವಮಾನವ ಸಂದೇಶ ದಾರಿ ಮಾಡಿಕೊಡುತ್ತದೆ.

ಇದರ ಜೊತೆಗೆ, ಬಸವಣ್ಣನವರ 'ಕಾಯಕವೇ ಕೈಲಾಸ' ಎಂಬ ಮಾತು ಕುವೆಂಪು ಕೃತಿಗಳಲ್ಲಿ ಮೇಲಿಂದ ಮೇಲೆ ಧ್ವನಿತವಾಗುವುದನ್ನು ಕಾಣಬಹುದು. ಜಲಗಾರ ನಾಟಕದಲ್ಲಿ, ಜಲಗಾರನು ದೇವಾಲಯಕ್ಕೆ ಹೋಗಿ ದೇವರನ್ನು ದರ್ಶಿಸಿ ಪ್ರಾರ್ಥಿಸಬೇಕೆಂಬ ರೂಢಿಗತ ನಂಬಿಕೆಯನ್ನೇ ಧೂಳಿಪಟ ಮಾಡುತ್ತಾನೆ. ಬಸವಣ್ಣನವರಲ್ಲಿ 'ಕಾಯಕವೇ ಕೈಲಾಸ'ವಾದರೆ, ಕುವೆಂಪು ಅವರಲ್ಲಿ 'ಕಾಯಕ ನಡೆಸುವಾತನೇ ಶಿವ'ನಾಗುತ್ತಾನೆ. ಈ ವಿಷಯದಲ್ಲಿ ಬಸವಣ್ಣ–ಕುವೆಂಪು ಇಬ್ಬರೂ 'ಮನುಜಮತ'ದವರು ಮತ್ತು 'ವಿಶ್ವಪಥಿಕ'ರು ಎನ್ನಬಹುದು.

ಬುದ್ಧನನ್ನು ಬೆಳಕು ಎಂದು ಪರಿಭಾವಿಸಿದಂತೆಯೇ, 'ಶ್ರೀ ಬಸವೇಶ್ವರರಿಗೆ'[15] ಕವಿತೆಯಲ್ಲಿ, 'ಕಾರ್ತೀಕದ ಕತ್ತಲಿನ ಆಕಾಶದೀಪ'ವೆಂದು ಕರೆಯುವ ಮೂಲಕ, ಬಸವಣ್ಣನವರನ್ನು ಜ್ಞಾನಪರಂಪರೆಯಲ್ಲಿ ಗುರುತಿಸುತ್ತಾರೆ.

**ಜಾತಿಪದ್ಧತಿಯ ಹೋಮಕೂಪಕ್ಕೆ**
**ಬಿದ್ದು, ವೈದಿಕರ ಯಜ್ಞತಾಪಕ್ಕೆ**
**ಬಲಿಹೋದ ದಲಿತ ಜೀವರನೆತ್ತಿ ಮತಿವಿಚಾರಕ್ಕೆ**
**ಕಾಯಕದ ದಿವ್ಯ ತತ್ತ್ವದಾ ಸುಕ್ಷೇಮ ಧರ್ಮನಾಕಕ್ಕೆ**
**ನಡೆಸಿದ ಮಹಾತ್ಮ**

ಎಂದು ನಮಸ್ಕರಿಸುತ್ತಾರೆ. ಕೇವಲ ಕೆಲವೇ ಪದಗಳಲ್ಲಿ, ಬಸವಣ್ಣನವರ ಸಮಾಜೋದ್ಧಾರದ ಕೆಲಸ, ಕಾಯಕದ ಮಹತ್ವ, ಅಸ್ಪೃಶ್ಯತೆಗೆ ವಿರೋಧ, ಮೌಢ್ಯವಿರೋಧ ಎಲ್ಲವನ್ನೂ ಹಿಡಿದಿಟ್ಟಿದ್ದಾರೆ.

**ಭಕ್ತಿಗಂಗೆಯನೆರೆದು,**
**ಮತಮೌಢ್ಯದಜ್ಞಾನ ಪಂಕವನು**
**ತೊಳೆದು ಶುಚಿಗೊಳಿಸು**
**ವಿಜ್ಞಾನ ವೇದಾಂತ ತೀರ್ಥದಿಂದೆ!'**

ಎಂದು ಪ್ರಾರ್ಥಿಸುತ್ತಾರೆ. 'ಬುದ್ಧದೇವ' ಸಾನೆಟ್ ಕೊನೆಯ ಆಶಯದ ನುಡಿಗೂ, ಈ ಸಾಲುಗಳಿಗೂ ಇರುವ ಸಾಮ್ಯತೆಯನ್ನು ಮನಗಾಣಬಹುದು. 'ವಚನಕಾರ ಬಸವೇಶ್ವರರು' ಲೇಖನದಲ್ಲಿ, ಬಸವಣ್ಣನವರನ್ನು ಯುಗಶಕ್ತಿ[16] ಎಂದು ಕರೆಯುವ ಮೂಲಕ ಕನ್ನಡ ಸಾಹಿತ್ಯದ ಭಾಷಾ ಬೆಳವಣಿಗೆಯ ದೃಷ್ಟಿಯಿಂದಲೂ ಕುವೆಂಪು, ಬಸವಣ್ಣನ ಪ್ರಾಮುಖ್ಯತೆಯನ್ನು ಗುರುತಿಸಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿನ 'ಬಸವಯುಗ' ಎಂಬುದನ್ನು ಕುವೆಂಪು ಅವರೂ ಅನುಮೋದಿಸಿದ್ದಾರೆ. 'ಬಸವಣ್ಣನ ನೇತೃತ್ವದಲ್ಲಿ ನಡೆದ ವಚನಕ್ರಾಂತಿಯಿಂದಲೇ, ಕನ್ನಡ ಭಾಷೆಯು, ಹಿಂದಣ ಚಂಪೂ ಕಾವ್ಯಗಳ ಸ್ವರ್ಣ ಸಿಂಹಾಸನದಿಂದ ಜೊಂಡಿನ ಚಾಪೆಗೆ ಅವತರಿಸಿ ಸಲುಗೆಯಿಂದ ಮಾತಾಡತೊಡಗುವಂತಾಯಿತು'[17] ಹಾಗೂ ವಚನ ಸಾಹಿತ್ಯದ ಭಾಷೆಯ ಕಾರಣದಿಂದಲೇ ಮುಂದೆ ಷಟ್ಪದಿ, ರಗಳೆ, ಸಾಂಗತ್ಯ, ಗದ್ಯ ಮೊದಲಾದ ಸಾಹಿತ್ಯ ಪ್ರಕಾರಗಳು ಬೆಳಕಿಗೆ ಬರುವಂತಾಯಿತು[18] ಎಂದು ಅಭಿಪ್ರಾಯಪಟ್ಟಿದ್ದಾರೆ. ಸಮಾಜ ಸುಧಾರಣೆಯ ಜೊತೆಗೆ, ಕನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ಬಸವಣ್ಣನವರ ಪ್ರಭಾವವನ್ನು ಸಾಕ್ಷೀಕರಿಸಲೆಂಬಂತೆ ನಾಡಗೀತೆಯಲ್ಲಿಯೂ ಬಸವೇಶ್ವರರನ್ನು ಉಲ್ಲೇಖಿಸಿದ್ದಾರೆ.

ಭಾಷೆ-ಸಾಹಿತ್ಯ, ಸಮಾಜ, ಅಧ್ಯಾತ್ಮ ಸಾಧನೆಗಳ ಹಿನ್ನೆಲೆಯಲ್ಲಿ ಬಸವೇಶ್ವರರನ್ನು ಕುರಿತು, 'ಬಸವಣ್ಣ ನಮ್ಮ ಮನೆಯ ಗುಡಿಯ ತಣ್ಬೊಡರು... ಅನಂತವು ಪೂರ್ಣದಲ್ಲಿ ಎಂತೋ ಅಂಶದಲ್ಲಿಯೂ ಪೂರ್ಣವಾಗಿಯೆ ಅನಂತ' ಎಂದು ಕೈವಾರಿಸಿದ್ದಾರೆ.

**ಸಭ್ಯತಾ ದೇವತೆ – ಮಹಾತ್ಮಾ ಗಾಂಧೀಜಿ**

ಬುದ್ಧ-ಬಸವಣ್ಣರನ್ನು ಕುವೆಂಪು ಕೇಳಿ, ಓದಿ ದರ್ಶಿಸಿದ್ದರೆ, ಗಾಂಧಿಯವರನ್ನು ಓದಿ-ಕೇಳಿದ್ದರ ಜೊತೆಗೆ 'ಕಂಡು' ದರ್ಶಿಸಿದ್ದಾರೆ. ಗಾಂಧಿಯುಗದಲ್ಲಿಯೇ ಕವಿ ಬಾಳಿ ಬರೆದವರು ಎಂಬುದು ಗಮನಾರ್ಹ. 'ನಾನು ಮಹಾತ್ಮಾ ಗಾಂಧಿಯನ್ನು ಅಕ್ಷರಶಃ ಅನುಸರಿಸುವವನು. ಅವರಲ್ಲಿರುವ ಆತ್ಮವೇ ನನ್ನಲ್ಲಿಯೂ ಇರುವುದು.'[19] ಇವು, ನೆನಪಿನ ದೋಣಿಯಲ್ಲಿ ಉಲ್ಲೇಖಿಸಲಾದ 1.04.1924ರ ದಿನಚರಿಯ ಮಾತುಗಳು.

ಆಗ್ಗೆ ಕುವೆಂಪು 20 ವರ್ಷದ ಯುವಕ. ಆಗಿನ್ನೂ ಕನ್ನಡದಲ್ಲಿ ಬರವಣಿಗೆಯನ್ನೇ ಪ್ರಾರಂಭಿಸಿರಲಿಲ್ಲ. ಕುವೆಂಪು ಒಬ್ಬ ಸಾಮಾನ್ಯ ವಿದ್ಯಾರ್ಥಿಯಾಗಿ ಗಾಂಧಿಯನ್ನು ಆವಾಹಿಸಿಕೊಂಡಿದ್ದ ತೀವ್ರತೆಗೆ ಸಾಕ್ಷಿಯಾಗಿ ಈ ಮಾತುಗಳಿವೆ ಎನ್ನಬಹುದು. ಆದು, ಇಡೀ ಭಾರತವೇ 'ಗಾಂಧಿ' ಎಂಬ ಸೂಜಿಗಲ್ಲಿಗೆ ಸಿಲುಕಿದ್ದ ಕಾಲ. ಅದಕ್ಕೆ ಕುವೆಂಪು ಕೂಡಾ ಹೊರತಾಗಿರಲಿಲ್ಲ. ಇದಕ್ಕೂ ಮುಂಚೆಯೇ ಅಂದರೆ 15.02.1924ರಂದು ಗಾಂಧಿಯವರು ಸೆರೆಮನೆಯಿಂದ ಬಿಡುಗಡೆಯಾಗಿದ್ದನ್ನು ಕೇಳಿ ಒಂದು ಇಂಗ್ಲಿಷ್ ಪದ್ಯವನ್ನೂ ಬರೆದಿದ್ದು, (ಅಪ್ರಕಟಿತ) ಅದರಲ್ಲಿ, ಗಾಂಧಿಯವರನ್ನು Great and uncrowned King ಎಂದು ಕರೆದಿದ್ದಾರೆ.

**Whose pain is India's pain,**
**Whose chain is India's chain,**
**Who weeps at other's woes**
**And cares not for his throes!**

ಇಂತಹ ಸಾಲುಗಳು, ಭಾರತದ ಜನಮಾನಸದ ಮೇಲೆ ಗಾಂಧಿಯವರ ಗಾಢ ಪ್ರಭಾವವನ್ನು ಸೂಚಿಸುತ್ತವೆ. ಅದೇ ವರ್ಷ ಡಿಸೆಂಬರಿನಲ್ಲಿ ಬೆಳಗಾವಿಗೆ ಹೋಗಿ, ದೂರದ ಪ್ರೇಕ್ಷಕರಾಗಿ ಗಾಂಧಿಯವರನ್ನು ಕಣ್ತುಂಬಿಕೊಂಡು ಬರುತ್ತಾರೆ.

ಸಭ್ಯತಾದೇವತೆ, ಪ್ರಚ್ಛನ್ನ ಕಲ್ಕಿ, ಕಲಿಯುಗ ಬುದ್ಧ, ಅಹಿಂಸಾಶೀಲ, ಸ್ವಾತಂತ್ರ್ಯದ ಶಿಲ್ಪಿ, ಲೋಕಗುರು ಮುಂತಾದ ವಿಶೇಷಣಗಳನ್ನು ಗಾಂಧಿಯವರಿಗೆ ಕುವೆಂಪು ಸೃಷ್ಟಿಸಿದ್ದಾರೆ. 'ನಿನ್ನ ಸಾನ್ನಿಧ್ಯತೀರ್ಥದಲಿ ಮಾನವನ ಮೋಹಮದಮಾತ್ಸರ್ಯಗಳು ಮಿಂದು ಪ್ರೇಮದಿ ಪುನೀತವಾಗಿಹವು!' ಎಂಬಂತಹ ಸಾಲುಗಳು, ಬುದ್ಧನನ್ನು ಧ್ಯಾನಿಸಿದಂತೆಯೇ ಇವೆ. 'ಸಭ್ಯತಾದೇವತೆ' ಕವಿತೆಯಲ್ಲಿ 'ಕ್ರಿಸ್ತ ಬುದ್ಧಾದಿಗಳೆ, ಮಾನವರ ಪೂಜಾಗೌರವಗಳನು ಕೈಕೊಳ್ವ ದೇವತೆಗಳಾಗುವಾ ಕಾಲವೈತಂದಿಹುದು' ಎನ್ನುವ ಮೂಲಕ, ಗಾಂಧಿಯವರನ್ನು ಕ್ರಿಸ್ತ, ಬುದ್ಧ ಮೊದಲಾದ ದೇವಮಾನವರ ಸಾಲಿನಲ್ಲಿ ಪರಿಭಾವಿಸುತ್ತಾರೆ.

ಕುವೆಂಪು ಅವರ ಗಾಂಧಿಯವರ ಬಗೆಗಿನ ಸಮಗ್ರ ಬರವಣಿಗೆಗಳ ಅವಲೋಕನಕ್ಕೆ ಹೋಗದೆ, ಕೇವಲ ಗಾಂಧಿಯವರ ಪ್ರಭಾವದ ಬಗ್ಗೆ ಒಂದೆರಡು ಉದಾಹರಣೆಗಳನ್ನು ಇಲ್ಲಿ ದಾಖಲಿಸಬಹುದಾಗಿದೆ.[20]

ಜಲಗಾರ ನಾಟಕದ ರಚನೆಯ ಕಾಲ 1927, ಅಂದರೆ ಗಾಂಧಿಯುಗ! ಅಷ್ಟೊತ್ತಿಗಾಗಲೇ ಗಾಂಧಿ ಭಾರತದ ರಾಜಕಾರಣದ ಕೇಂದ್ರಬಿಂದುವಾಗಿದ್ದರು. ಅದಕ್ಕಿಂತ ಹೆಚ್ಚಾಗಿ ಭಾರತದ ಸಾಮಾಜಿಕ ಪರಿವರ್ತನೆಗಾಗಿ ಕಟಿಬದ್ಧರಾಗಿದ್ದರು. ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ ಕಾರ್ಯಕ್ರಮಗಳು ಅವರ ಜೀವನದ ಭಾಗವಾಗಿದ್ದವು. ಪರಿಹಾರ ಕಾರ್ಯಕ್ರಮಗಳ ಬಗ್ಗೆ ಕೇವಲ ಉಪದೇಶ ನೀಡದೆ,

ಕಾರ್ಯತಃ ಅನುಸರಿಸುವ ಮೂಲಕ ಗಾಂಧಿ ದೊಡ್ಡ ಬದಲಾವಣೆಗೆ ಕಾರಣರಾಗಿದ್ದರು. ಇತ್ತ ಕುವೆಂಪು ಅವರೂ ಸಾಂಸ್ಥಿಕ ಮತಧರ್ಮಗಳನ್ನು, ದೇವಾಲಯ ವ್ಯವಸ್ಥೆಯನ್ನು ಧಿಕ್ಕರಿಸುವವರಾಗಿದ್ದರು. ಅವರಿಗೆ ದೇವಾಲಯಗಳಿಗೆ ಹೋಗಿಯೇ ದೇವರ ದರ್ಶನ ಮಾಡಬೇಕೆನ್ನುವುದರಲ್ಲಿ ಯಾವ ಅರ್ಥವೂ ಕಾಣುತ್ತಿರಲಿಲ್ಲ. ಅತ್ತ ಗಾಂಧಿ, ಹರಿಜನರಿಗೆ ದೇವಾಲಯ ಪ್ರವೇಶಕ್ಕಾಗಿ ಹೋರಾಟ ನಡೆಸುತ್ತಿದ್ದರೆ, ಇತ್ತ ಕುವೆಂಪು ಜಲಗಾರ ನಾಟಕದಲ್ಲಿ, ಜಲಗಾರನೊಬ್ಬ ದೇವಾಲಯಕ್ಕೆ ಹೋಗುವುದನ್ನೇ ನಿರಾಕರಿಸಿ, ಕಾಯಕದಲ್ಲಿಯೇ ಶಿವನನ್ನು ಕಾಣುವಂತೆ ಚಿತ್ರಿಸುತ್ತಾರೆ. 'ಹರಿಜನರಿಗೆ ಪ್ರವೇಶವಿಲ್ಲದ ಯಾವ ದೇವಾಲಯಕ್ಕೂ ನಾನು ಹೋಗುವುದಿಲ್ಲ' ಎಂಬ ಗಾಂಧಿಯವರ ಮಾತುಗಳನ್ನು, ಅತ್ಯಂತ ಧ್ವನಿಪೂರ್ಣವಾಗಿ ಕುವೆಂಪು ಜಲಗಾರದಲ್ಲಿ ಹೊರಹೊಮ್ಮಿಸುತ್ತಾರೆ. ಸೂಕ್ಷ್ಮವಾಗಿ ಪರಿಭಾವಿಸುತ್ತಾ ಹೋದರೆ ಜಲಗಾರ, ಶಿವ, ಗಾಂಧಿ ಎಲ್ಲರೂ ಒಂದೇ ಆಗಿರುತ್ತಾರೆ!

ಬುದ್ಧ–ಬಸವ–ಗಾಂಧಿ, ಈ ಮೂವರೂ ಅಹಿಂಸಾವಾದಿಗಳು. ವೈಯಕ್ತಿಕ ನಿಂದನೆಗಳಿಗೆ ಕಿವುಡಾದವರು. ಮತ–ಧಾರ್ಮಿಕ ಕರ್ಮಠತೆಯನ್ನು ನಿರಾಕರಿಸಿ ವೈಯಕ್ತಿಕ ಮೌಲ್ಯಗಳ ಮಹತ್ವವನ್ನು ಸಾರಿದವರು. ಧಾರ್ಮಿಕ ಆಚರಣೆಗಳಲ್ಲಿ ಅಹಿಂಸೆ ಸಲ್ಲದು ಎಂಬುದು ಅವರೆಲ್ಲರ ಆಶಯವೂ ಹೌದು. ಗಾಂಧಿಯುಗದಲ್ಲಿ ರಚಿತವಾದ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಮೇಲೆ ಈ ಅಹಿಂಸಾ ತತ್ವದ ಪ್ರಭಾವ ಸಾಕಷ್ಟು ಪರಿಣಾಮ ಬೀರಿದೆ. ಮೂಲ ರಾಮಾಯಣದಲ್ಲಿ, ಬೇಡನೊಬ್ಬನ ಬಾಣದಿಂದ ಗಂಡು ಹಕ್ಕಿ ಸತ್ತುಹೋಗುವುದು, ಹೆಣ್ಣು ಹಕ್ಕಿ ರೋಧಿಸುವುದು, ಅದರಿಂದ ಶೋಕಗೊಂಡ ವಾಲ್ಮೀಕಿಯ ಬಾಯಲ್ಲಿ ಶ್ಲೋಕರೂಪದಲ್ಲಿ ಶಾಪ ಹೊರಡುವುದು, ಅದೇ ಶ್ಲೋಕದ ಛಂದಸ್ಸಿನಲ್ಲಿ ರಾಮಾಯಣ ರಚನೆಯಾಗುವುದು ನಡೆಯುತ್ತದೆ. ಆದರೆ, 'ಶ್ರೀರಾಮಾಯಣ ದರ್ಶನಂ' ಕಾವ್ಯದಲ್ಲಿ ಕುವೆಂಪು, ಬೇಡನ ಬಾಣದಿಂದ ಗಾಯಗೊಂಡ ಹಕ್ಕಿಯನ್ನು ಶುಶ್ರೂಷೆ ಮಾಡುವ ವಾಲ್ಮೀಕಿ, ಬೇಡನನ್ನು ಶಪಿಸುವ ಬದಲು, ಆತನಿಗೆ ಒಪ್ಪಿಗೆಯಾಗುವಂತೆ 'ಅಹಿಂಸಾ ಬೋಧೆ'ಯನ್ನುಂಟು ಮಾಡಿ, ನಂತರ ರಾಮಾಯಣ ರಚನೆಗೆ ಮುಂದಾಗುವಂತೆ ಚಿತ್ರಿಸಿದ್ದಾರೆ.[21]

ಮತ್ತೊಂದು ಸನ್ನಿವೇಶದಲ್ಲಿ, ಪುರೋಹಿತರ ಸಲಹೆಯಂತೆ ದಶರಥ ಪುತ್ರಕಾಮೇಷ್ಠಿ ಯಾಗಕ್ಕೆ ಮುಂದಾದಾಗ, ಜಾಬಾಲಿ ಮುನಿಯ ಪ್ರವೇಶವಾಗುತ್ತದೆ. ಆತ, ದಶರಥನಿಗೆ, 'ಪೂರ್ವಪದ್ಧತಿಯಂತೆ ದಿಗ್ವಿಜಯ ಹಯಮೇಧ ಮೊದಲಾದವನ್ನು ಮಾಡದೆ, ಹಿಂಸಾ ಕ್ರೌರ್ಯವಿಲ್ಲದೆ ಮಾಡುವ ಪ್ರಾರ್ಥನೆಯಿಂದ ಪ್ರೇಮಮೂರ್ತಿಗಳಾದ ಮಕ್ಕಳ ಜನನವಾಗುತ್ತದೆ. ಏಕೆಂದರೆ ವಿಶ್ವವನ್ನು ಸಮಗ್ರವಾಗಿ ವ್ಯಾಪಿಸಿರುವ ಸರ್ವಾಂತರ್ಯಾಮಿ ಚೇತನ ತಾನು ಪ್ರೇಮಾತ್ಮವಾಗಿರುವುದರಿಂದ, ಹಿಂಸೆಯಿಂದ ಪ್ರೇಮಮೂರ್ತಿಗಳಾದ ಸಂತಾನ ಲಭಿಸುವುದಿಲ್ಲ'[22] ಎಂದು ಹೇಳುತ್ತಾನೆ. ಜೊತೆಗೆ,

'ಜನಮನದ ಶಕ್ತಿ ಮತ್ತು ಅದರ ಅಭಿಪ್ಸೆಯಿಂದ ಮಾತ್ರ ಮಹಾತ್ಮರ ಅವತಾರವಾಗುತ್ತದೆ' ಎಂದೂ ಹೇಳುತ್ತಾರೆ. ಇಲ್ಲಿ 'ಜನಮನ' ಎಂದರೆ ಗಾಂಧಿ ಬಯಸಿದ್ದ 'ಶ್ರೀಸಾಮಾನ್ಯ' ಅಲ್ಲದೆ ಬೇರಲ್ಲ. ಅದೇ ಪ್ರಜಾಪ್ರಭುತ್ವದ ಲಕ್ಷಣ. ಈ ಸಂದರ್ಭದಲ್ಲಿ, ಕವಿ ಗಾಂಧಿಯುಗದ ಎರಡು ಪ್ರಮುಖ ಲಕ್ಷಣಗಳಾದ 'ಶ್ರೀಸಾಮಾನ್ಯತೆ' ಮತ್ತು 'ಅಹಿಂಸಾ ತತ್ವ' ಎರಡನ್ನೂ ಪ್ರತಿಪಾದಿಸಿರುವುದನ್ನು ಮನಗಾಣಬಹುದು.

ಭಾರತ ಸ್ವತಂತ್ರವಾದಾಗ ಬರೆದ ಶ್ರೀ 'ಸ್ವಾತಂತ್ರ್ಯೋದಯ ಮಹಾಪ್ರಗಾಥ'ದ ಒಂದು ಭಾಗದಲ್ಲಿ[23] ಗಾಂಧಿಯವರ ಮಾನವೀಯ ಮುಖವನ್ನು ಬಹುವಾಗಿ ಸ್ತುತಿಸಿದ್ದಾರೆ. ಅವರ ಕಗ್ಗೊಲೆಯ ದಿನ, ಆಕಾಶವಾಣಿಯಲ್ಲಿ ಮಾಡಿದ ಭಾಷಣದಲ್ಲಿ,

**ರಾಷ್ಟ್ರಪಿತ ದಿವಂಗತ**
**ಉನ್ಮತ್ತ ಹಸ್ತ ಹತ!**
**ನರಹೃದಯದ ವಿಷವಾರ್ಧಿಗೆ**
**ಜೀವಾಮೃತ ಸಮರ್ಪಿತ!**
**ಕ್ಷಮಿಸು, ಓ ಜಗತ್‌ಪಿತಃ**
**ಅದೃಷ್ಟ ಹೀನ ಭಾರತ!**

ಎಂದು ನೊಂದು ನುಡಿಯುತ್ತಾರೆ. 'ಜಲಗಾರ' ನಾಟಕದಿಂದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯವರೆಗೂ ಗಾಂಧಿಯವರ ಪ್ರಭಾವ ಪ್ರೇರಣೆಗಳನ್ನು ಗುರುತಿಸಬಹುದು. ಅದೊಂದೇ ವಿಸ್ತೃತ ಅಧ್ಯಯನವಾಗುತ್ತದೆ. ಆದ್ದರಿಂದ, 'ಗಾಂಧಿಯುಗದ ಅಧಿಕೃತ ಸಾಹಿತ್ಯಕ ಅಭಿವ್ಯಕ್ತಿ ಕುವೆಂಪು' ಎಂದಷ್ಟೇ ಹೇಳಿ, ಅವರ 'ಪೂರ್ಣದೃಷ್ಟಿಗೆ ಗಾಂಧಿಜಿ'[24] ಲೇಖನದ ಸಾಲುಗಳನ್ನಿಲ್ಲಿ ಉಲ್ಲೇಖಿಸಬಹುದು.

''ಗಾಂಧೀಜಿ ಜೀವನವನ್ನು ಅವಲೋಕಿಸಿದರೆ ದೇಶಭಕ್ತಿ, ಸಮಾಜಸೇವೆ, ಸ್ವಾತಂತ್ರ್ಯಸಂಪಾದನೆ. ಹರಿಜನೋದ್ಧಾರ, ಸ್ವದೇಶಿ, ಖಾದಿ, ಇತ್ಯಾದಿ ರಾಜಕೀಯ ಸಾಮಾಜಿಕ ಆರ್ಥಿಕ ಭೂಮಿಕೆಗಳಿಗೆ ತುರೀಯವಾದ ಶಾಶ್ವತ ತತ್ತ್ವವೊಂದು ಬೋಧೆಯಾಗುತ್ತದೆ. ಆ ತತ್ತ್ವವೆ 'ಪೂರ್ಣ ಮನುಷ್ಯತ್ವ'ದ ಸಂಪೂರ್ಣ ವಿಕಾಸಕ್ಕೆ ಕಾರಣವೆಂದೂ, 'ಸಕಲ ಪ್ರಯೋಜನ ಮೌಲಭೂತ'ವಾದ 'ಸಚ್ಚಿದಾನಂದ ಸಾಕ್ಷಾತ್ಕಾರ'ವೆ ಅದರ ಅವತರಣೋದ್ದೇಶವೆಂದೂ ಆ ಪರಮ ಪ್ರಯೋಜನವು ಅತೀತದಲ್ಲಿ ಮಾತ್ರವಲ್ಲದೆ ಐಹಿಕದಲ್ಲಿಯೂ ಸಂಸ್ಥಾಪಿತವಾಗಬೇಕಾಗಿರುವುದು ಸೃಷ್ಟಿಯ ಚರಮೋದ್ದೇಶವೆಂದೂ ನಮಗೆ ಬುದ್ಧಿಗೋಚರವಾಗುತ್ತದೆ. ಅಂತಹ ಅಮರ್ತ್ಯಸ್ಥಿತಿ ಮರ್ತ್ಯಕ್ಕೂ ಇಳಿಯಲು ಮನುಷ್ಯತ್ವ ತನ್ನ ಸರ್ವಸ್ವವನ್ನೂ ಸಮರ್ಪಿಸಲು ತಪಸ್ವಿಯಾಗದಿದ್ದರೆ ಬರಿಯ ರಾಜಕೀಯವೂ ಸಾಮಾಜಿಕವೂ ಆರ್ಥಿಕವೂ ಆಗಿರುವ ಪ್ರಯತ್ನಗಳಿಂದ, ಅವು ಎಷ್ಟೇ ಶ್ಲಾಘನೀಯವಾಗಿರಲಿ ಉದಾತ್ತವಾಗಿರಲಿ, ಸುಖಶಾಂತಿಗಳು ನಮ್ಮ ಭಾಗಕ್ಕೆ ಬರಿಯ ಹಂಬಲಿಕೆಗಳಾಗಿಯೆ ಉಳಿಯುತ್ತವೆ ಎಂಬ

ಎಚ್ಚರಿಕೆಗೆ ಗಾಂಧೀಜಿಯ ಜೀವನ ಚರಿತ್ರೆ, ತಪಿಸುತ್ತಿರುವ ಪ್ರಪಂಚಕ್ಕೆ ವಿಧಿ ಎತ್ತಿದ 'ಬೆಂಕಿಯ ತೋರ್ಬೆರಳಂತೆ', ಒಂದು ಭಗವತ್ ಸಾಕ್ಷಿಯಾಗಿದೆ."

ಮೇಲಿನ ಗದ್ಯಭಾಗದಲ್ಲಿ ಬಂದಿರುವ 'ಬೆಂಕಿಯ ತೋರ್ಬೆರಳು' ಎಂಬ ಮಾತು ಗಮನಾರ್ಹ. 'ಬುದ್ಧ-ಜ್ಞಾನ-ಬೆಳಕು', 'ತಣ್ಣೊಡರು ಹಾಗೂ ಆಕಾಶದೀಪ' ಮತ್ತು 'ಬೆಂಕಿಯ ತೋರ್ಬೆರಳು' ಇವೆಲ್ಲವೂ ಜ್ಞಾನಪರಂಪರೆಯ ಸಂಕೇತಗಳೇ ಆಗಿವೆ. ಇದೆಲ್ಲವನ್ನು ಸಮಗ್ರವಾಗಿ ಪರಿಭಾವಿಸಿದರೆ, ಲೇಖನದ ಪ್ರಾರಂಭದಲ್ಲಿಯೇ ಹೇಳಿರುವ, ವಿಭಿನ್ನ ವಿಚಾರಧಾರೆಗಳ ನಡುವೆಯೂ ಸಮನ್ವಯ ಸೂತ್ರವನ್ನು ಕಾಣುವ ಕವಿಯ 'ಪೂರ್ಣದೃಷ್ಟಿ'ಯ ದರ್ಶನವಾಗುತ್ತದೆ.

ಕೊನೆಯದಾಗಿ, ಹುಟ್ಟಿನಿಂದ ಅಭಾರತೀಯವಾದರೂ, ಸ್ವೀಕರಣದಿಂದ ಭಾರತೀಯವೇ ಆಗಿರುವ ಮತ್ತೊಂದು ಜ್ಞಾನಪರಂಪರೆಯ ಕ್ರಿಸ್ತನ ಬಗ್ಗೆ ಇಲ್ಲಿಯೇ ಒಂದೆರಡು ಮಾತುಗಳನ್ನು ಹೇಳಬಹುದು. ಕುವೆಂಪು ಅವರು ಬುದ್ಧ-ಗಾಂಧಿಯ ವಿಷಯವಾಗಿ ಮಾತನಾಡುವಾಗ ಸಾಮಾನ್ಯವಾಗಿ ಕ್ರಿಸ್ತನನ್ನೂ ಸೇರಿಸಿ ಮಾತನಾಡಿರುವುದು ಕಂಡು ಬರುತ್ತದೆ. ಕುವೆಂಪು ಅವರಿಗೆ ಯೇಸುಕ್ರಿಸ್ತನ ಪರಿಚಯ, ಬಾಲ್ಯದಲ್ಲಿಯೇ, ಅವರ ಐಗಳ ಶಾಲೆಯಲ್ಲಿಯೇ ಆಗಿತ್ತು. ಮೋಸೆಸ್ ಎಂಬ ಶಿಕ್ಷಕರು, ಕ್ರಿಸ್ತನ ಕಥೆಯ ಜೊತೆಗೆ ಬೈಬಲ್ಲಿನ ಪರಿಚಯವನ್ನೂ ಮಾಡಿಕೊಟ್ಟಿದ್ದರು. ಅದರಿಂದ ಪ್ರೇರಿತರಾಗಿ, ಮನೆ ಹಿಂದಿನ ಗುಡ್ಡಕ್ಕೆ ಹೋಗಿ, ಕ್ರಿಸ್ತನನ್ನು ಪ್ರಾರ್ಥಿಸಿದ್ದನ್ನು ನೆನಪಿನ ದೋಣಿಯಲ್ಲಿ ದಾಖಲಿಸಿದ್ದಾರೆ. ಮೈಸೂರಿಗೆ ಹೈಸ್ಕೂಲ್ ಶಿಕ್ಷಣಕ್ಕಾಗಿ ಬಂದಾಗ, ಇನ್ನೂ ವ್ಯಾಪಕವಾಗಿ ಬೈಬಲ್ ಅಧ್ಯಯನ ಮಾಡುವ ಅವಕಾಶ ಅವರಿಗೆ ದೊರೆಯುತ್ತದೆ. 'ಮಾತೆ ಮೇರಿ – ಮಗು ಯೇಸು'[25] ಎಂಬ ಕವನದಲ್ಲಿ, 'ಭವತಾರಿಣಿ ಜಗದಂಬೆಯ ಮಾತೃಲೀಲೆಯಲ್ಲಿ ಕ್ರಿಸ್ತನೂ ಒಬ್ಬ ಮಹಾಪುರುಷ. ಆತನನ್ನು ಎತ್ತಿಕೊಂಡ ಮಾತೆ ತಾಯ್ತನವೇ ಮೇರಿ' ಎಂದು ಕ್ರಿಸ್ತನನ್ನು ಭಾರತೀಯಗೊಳಿಸಿರುವುದನ್ನು ಕಾಣಬಹುದು. ಅವರಿಗೆ ಯಶೋದೆ-ಕೃಷ್ಣ ಬೇರೆಯಲ್ಲ; ಮೇರಿ-ಕ್ರಿಸ್ತ ಬೇರೆಯಲ್ಲ. ರಾಮ, ಕೃಷ್ಣ, ಬುದ್ಧ, ಕ್ರಿಸ್ತ ಎಲ್ಲರೂ ಒಂದೆ ಎಂಬ ಭಾವ ಕವಿತೆಯಲ್ಲಿದೆ. ಗಾಂಧಿ ಕೊಲೆಯಾದ ವಿಷಯ ತಿಳಿದಾಗ, ಕುವೆಂಪು ಅವರಿಗೆ ಮೊದಲು ನೆನಪಾಗುವುದು ಕ್ರಿಸ್ತ. ಕ್ರಿಸ್ತನ ತ್ಯಾಗ, ಸಹನೆಗಳ ಮಾನುಷ ರೂಪವೇ ಗಾಂಧಿಜಿ ಎಂದು ಕುವೆಂಪು ಭಾವಿಸುತ್ತಾರೆ.

ತೇಜಸ್ವಿ ಹುಟ್ಟಿದಾಗ ಬರೆದ 'ಸ್ವಾಗತ ನಿನಗಲೆ ಕಂದಯ್ಯ'[26] ಎಂಬ ಕವನದಲ್ಲಿ, 'ನಿನ್ನ ರೂಪದಲ್ಲಿ ಯಾರನ್ನು ಕಳಿಸಿದ್ದಾನೋ ಕಾಣೆ? ರಾಮನೊ? ಕೃಷ್ಣನೊ? ಕ್ರಿಸ್ತನೊ? ಬುದ್ಧನೊ?' ಎನ್ನುತ್ತಾರೆ. ಮುಂದುವರೆದು, ಸೂರ್ಯ, ಚಂದ್ರ, ಆಕಾಶ, ನಕ್ಷತ್ರ, ಸಾಗರ, ಪರ್ವತ ಮೊದಲಾದವುಗಳಂತೆ ನಮ್ಮ ಗಾಂಧಿಯೂ ಇದ್ದಾರೆ ಎಂದು

ಮಗುವಿಗೆ ಹೇಳುತ್ತಾರೆ. ಇದು ಕವಿಯು ಬುದ್ಧ-ಕ್ರಿಸ್ತಾದಿ ಮಹಾವಿಭೂತಿಗಳಲ್ಲಿ ಇಟ್ಟಿರುವ ನಂಬಿಕೆ ಹಾಗೂ ಅವರ ಮಹತ್ವಾಕಾಂಕ್ಷೆಯನ್ನು ಪ್ರತಿಫಲಿಸುತ್ತದೆ.

'ಶ್ಮಶಾನ ಕುರುಕ್ಷೇತ್ರಂ' ನಾಟಕದ ಕೊನೆಯ ದೃಶ್ಯದಲ್ಲಿ, ಕೃಷ್ಣನು ರುದ್ರನಿಗೆ, ಮುಂಬರಲಿರುವ ಕಲಿಯುಗದ ದರ್ಶನ ಮಾಡಿಸುತ್ತಾನೆ. ಆಗ,

**'ಗೌತಮ ಬುದ್ಧನವನ್, ಮೌಢ್ಯನಿವಾರಕನ್!...**
**ಕ್ರಿಸ್ತನ್! ದೀನರಕ್ಷಕನ್...**
**ಅಹಿಂಸಾವ್ರತಂ, ಮಹಾತ್ಮನ್....'[27]**

ಎಂದು ಪರಿಚಯಿಸುವ ಚಿತ್ರಣ ಅತ್ಯಂತ ಅರ್ಥಪೂರ್ಣವಾಗಿ ಹೊರಹೊಮ್ಮಿರುವುದನ್ನು ಕಾಣಬಹುದಾಗಿದೆ.

ಬುದ್ಧ-ಬಸವ-ಗಾಂಧಿ, ಈ ಮೂವರೂ, ಸರ್ವೋದಯ ಮತ್ತು ಸಮಾನತೆಗಾಗಿ ವ್ಯಕ್ತಿಶುದ್ಧತ್ವವನ್ನು (ಆತ್ಮಶುದ್ಧಿ) ಪ್ರತಿಪಾದಿಸಿದವರು. ಸಮಷ್ಟಿಯ ಉದ್ಧಾರವಾಗಬೇಕಾದರೆ, ವ್ಯಕ್ತಿಯ ಅಂತರಂಗದ ಉದ್ಧಾರ ಮೊದಲಾಗಬೇಕು ಎಂದು ಆಶಿಸಿದವರು. ಈ ಹಿನ್ನೆಲೆಯಲ್ಲಿ ಅಧ್ಯಾತ್ಮದ ವೈಯಕ್ತೀಕರಣವನ್ನು ಪ್ರತಿಪಾದಿಸುವ, ಆಧ್ಯಾತ್ಮಿಕ ನೆಲೆಯಲ್ಲಿ ಸರ್ವೋದಯ ಸಮಾನತೆಯನ್ನು ಪ್ರತಿಪಾದಿಸುವ ಕುವೆಂಪು ಅವರ ವಿಶ್ವಮಾನವ ಸಂದೇಶವು, ಭಾರತೀಯ ಜ್ಞಾನಪರಂಪರೆಯ ಈವತ್ತಿನ ಸತ್ಯವೂ, ಅಗತ್ಯವೂ ಆಗಿರುತ್ತದೆ.

ಒಟ್ಟಾರೆ, ಬುದ್ಧ-ಕ್ರಿಸ್ತ-ಬಸವ-ಗಾಂಧಿ ಮೊದಲಾದ ವಿಭೂತಿಪುರುಷರಲ್ಲಿ ಕವಿಯ ನಂಬಿಕೆ ಅಚಲ. ಆ ಮಹಾಪುರುಷರೂ, ಪ್ರಾರಂಭದಲ್ಲಿ ಎಲ್ಲರಂತೆಯೇ 'ಬಿಂದು' ಮಾತ್ರವಾಗಿದ್ದರು; ಆದರೆ, ತಮ್ಮ ಸಾಧನೆಗಳಿಂದ 'ಸಿಂಧು'ವಾಗಿದ್ದಾರೆ. ಅವರು ಯಾರೂ ಓದಿ ಮರೆತುಬಿಡಬಹುದಾದ ಕಥಾಪಾತ್ರಗಳಲ್ಲ. ನಮ್ಮ ಜ್ಞಾನಪರಂಪರೆಯ ಬಹುಮುಖ್ಯ ಕೊಂಡಿಗಳು. ಪರಂಪರೆಯ ನಿರಂತರತೆ, ಇಂತಹ ವಿಶ್ವಮಾನವರನ್ನು ದರ್ಶಿಸುವುದರಲ್ಲಿಯೇ ಮುಂದುವರೆಯುತ್ತದೆ. ಆದ್ದರಿಂದ ಅವರೆಲ್ಲರೂ ನಮ್ಮ ಬದುಕಿನ ಅವಿಭಾಜ್ಯ ಅಂಗಗಳೆಂದು ಕವಿ ಭಾವಿಸುತ್ತಾರೆ.

## ಕೊನೆ ಟಿಪ್ಪಣಿಗಳು:

1. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಗದ್ಯ: ಸಂಪುಟ–2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 496 ("ಮೌಢ್ಯದಿಂದ ಪಾರು ಮಾಡಲು ಎರಡು ಪ್ರಯತ್ನಗಳು ನಡೆದವು. ಒಂದು ಬುದ್ಧಿಸಂ, ಬುದ್ಧದೇವ ಬಹಳ ಪ್ರಯತ್ನ ಮಾಡಿದ, ಈ ಮೌಢ್ಯದಿಂದ ನಮ್ಮನ್ನು ಪಾರುಮಾಡಬೇಕೆಂದು. ಕಡೆಗೆ ಏನಾಯಿತು? ಒಂದಷ್ಟು ದೂರ ನಡೆಯಿತು. ಆಮೇಲೆ ಬಿದ್ದುಹೋಯಿತು. 12ನೆಯ ಶತಮಾನದಲ್ಲಿ ಜಾತಿವಿನಾಶ ಮಾಡಬೇಕೆಂದು ಹೇಳಿ ಬಸವೇಶ್ವರರು ಜಗತ್ತಿನಲ್ಲಿ ಯಾರೂ ಮಾಡದೆ ಇರುವ ಪ್ರಯತ್ನ ಪ್ರಾರಂಭ ಮಾಡಿದರು.")
2. ಅದೇ, ಪು.ಸಂ. 633
3. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 125
4. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 513
5. ಅದೇ, ಪು.ಸಂ. 368–69
6. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಗದ್ಯ: ಸಂಪುಟ–2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 29
7. ಅದೇ, ಪು.ಸಂ. 850
8. ಅದೇ, ಪು.ಸಂ. 933
9. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಗದ್ಯ: ನೆನಪಿನ ದೋಣಿಯಲ್ಲಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 1023
10. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಗದ್ಯ: ಸಂಪುಟ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 299
11. ಅದೇ, ಪು.ಸಂ. 299 ("ಅವರ ಉದ್ದೇಶ ಕೃತಿಲೋಕದ ರಸಾನುಭವಲ್ಲ; ಭವಲೋಕಕ್ಕೆ ಅಭವಾಲೋಕವನ್ನು ತರುವ ಗುರುತರ ಕಾರ್ಯ. ಅವರು ಬಾರಿಸಲು ಆಸೆಪಟ್ಟಿದ್ದು ವೀಣೆಯನ್ನಲ್ಲ, ಒಡಲನ್ನು. ಅವರು ಹಸನುಗೊಳಿಸಲಿ ಎಳಸಿದ್ದು ಕಿನ್ನರಿಯ ತಂತಿಗಳನ್ನಲ್ಲ, ನರನ ನರಗಳನ್ನು... ಮನುಷ್ಯನ ಹೃದಯದಲ್ಲಿ ಮಹೇಶ್ವರನನ್ನು ಕಡೆದು ರಚಿಸುವ ಮಹತ್ತರವಾದ ಭವ್ಯೋದ್ದೇಶ ಅವರದಾಗಿತ್ತು")
12. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಗದ್ಯ: ಸಂಪುಟ–2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 962
13. ಅದೇ, ಪು.ಸಂ. 1053–54
14. ಅದೇ, ಪು.ಸಂ. 853
15. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 883

16. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಗದ್ಯ: ಸಂಪುಟ–1, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 298–302
17. ಅದೇ, ಪು.ಸಂ. 52
18. ಅದೇ, ಪು.ಸಂ. 715
19. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಗದ್ಯ: ನೆನಪಿನ ದೋಣಿಯಲ್ಲಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 304 [1–4–1924]
20. ಗಾಂಧಿಯವರನ್ನು ಕುರಿತ ಕುವೆಂಪು ಬರಹಗಳ ಸಮಗ್ರ ಅವಲೋಕನಕ್ಕೆ, 'ಗಾಂಧಿ – 150: ಕುವೆಂಪು ಮತ್ತಿತರ ಕವಿಗಳ ಆಯ್ದ ಬರಹಗಳು' ಕೃತಿಯನ್ನು ನೋಡಬಹುದಾಗಿದೆ. (ಸಂಪಾದಕರು: ಡಾ. ಬಿ.ಆರ್. ಸತ್ಯನಾರಾಯಣ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳಿ, 2019)
21. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಕಾವ್ಯ: ಶ್ರೀರಾಮಾಯಣ ದರ್ಶನಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 1–1–36–50
22. ಅದೇ, ಪು.ಸಂ. 1–1–139–263
23. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 95–97
24. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಗದ್ಯ: ಸಂಪುಟ–2, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 337–344
25. ಅದೇ, ಪು.ಸಂ. 481
26. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 945–47
27. ಕುವೆಂಪು, ಶಿವಾರೆಡ್ಡಿ ಕೆ.ಸಿ. (ಸಂ), (2020), ಕುವೆಂಪು ಸಮಗ್ರ ನಾಟಕ, (ಶ್ಮಶಾನ ಕುರುಕ್ಷೇತ್ರಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ವಿದ್ಯಾರಣ್ಯ, ಹಂಪಿ, ಪು.ಸಂ. 120–21

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.